Downloaded from https:// www.studiestoday.com

ಕನ್ನಡ

# ಸುಗಮಭಾರತಿ

ಹತ್ತನೆಯ ಇಯತ್ತೆ



Downloaded from https:// www.studiestoday.com

Downloaded from https:// www.studiestoday.com



1st END PAPER

Downloaded from https:// www.studiestoday.com

Downloaded from https:// www.studiestoday.com

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ 2016/(ಪ್ರ.ಕ್ರ. 43/16) ಎಸ್‌ಡಿ-4
ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿನಾಂಕ
29.12.2017 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2018-19
ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ನೀಡಲಾಗಿದೆ.

# ಕನ್ನಡ

# ಸುಗಮಭಾರತಿ

## ಹತ್ತನೆಯ ಇಯತ್ತೆ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4

8Q47RB

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

Downloaded from https:// www.studiestoday.com

Downloaded from https:// www.studiestoday.com

**ಪ್ರಥಮಾವೃತ್ತಿ : 2018**

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

| | | |
|---|---|---|
| **ಕನ್ನಡ ಭಾಷಾ ಸಮಿತಿ** | : | ಡಾ. ಕೆ.ಕೆ. ಪತ್ತಾರ, ಅಧ್ಯಕ್ಷ<br>ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ<br>ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ<br>ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ<br>ಶ್ರೀ ಜಿ.ಸಿ. ಮಠ, ನಿಮಂತ್ರಿತ ಸದಸ್ಯ<br>ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ-ಸಚಿವರು |
| **ಕನ್ನಡ ಅಭ್ಯಾಸಗಟ ಸದಸ್ಯರು** | : | ಶ್ರೀ. ಶ್ರೀಶೈಲ ಜಿ. ಅವಟಿ<br>ಶ್ರೀ. ಜಿ. ಡಿ. ಮೋರೆ |
| **ಸಂಯೋಜನ ಪ್ರಮುಖ** | : | ಡಾ. ಸದಾನಂದ ಎಂ ಬಿಳ್ಳೂರ, ವಿಶೇಷಾಧಿಕಾರಿಗಳು ಕನ್ನಡ ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ - 4<br>ಶ್ರೀ. ಆರ್. ಎಮ್ ಗಣಾಚಾರಿ, ವಿಷಯ ಸಹಾಯಕರು, ಕನ್ನಡ |
| **ಚಿತ್ರಕಾರ** | : | ಶ್ರೀ ರಾಜೇಂದ್ರ ಗಿರಧಾರಿ |
| **ಮುಖಪುಟ** | : | ಯಶವಂತ ದೇಶಮುಖ |
| **ನಿರ್ಮಿತಿ** | : | ಶ್ರೀ. ಸಚ್ಚಿತಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ<br>ಶ್ರೀ. ರಾಜೇಂದ್ರ ಚಿಂದರಕರ, ನಿರ್ಮಿತಿ ಅಧಿಕಾರಿ<br>ಶ್ರೀ. ರಾಜೇಂದ್ರ ಪಾಂಡಲೋಸ್ಕರ, ಸಹಾಯಕ ನಿರ್ಮಿತಿ ಅಧಿಕಾರಿ |
| **ಅಕ್ಷರ ಜೋಡಣೆ** | : | ಕ್ವಿಂಟೆಕ್ಸ್, ಫೋರ್ಟ, ಮುಂಬಯಿ |
| **ಕಾಗದ** | : | 70 ಜಿ. ಎಸ್. ಎಮ್, ಕ್ರಿಮ್‌ವೋವ್ಹ |
| **ಮುದ್ರಣಾದೇಶ** | : | N/PB/2018-19/(500) |
| **ಮುದ್ರಕ** | : | Spenta Multimedia Pvt.Ltd.,Thane |
| **ಪ್ರಕಾಶಕ** | : | ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,<br>ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ - 25. |

Downloaded from https:// www.studiestoday.com

Downloaded from https:// www.studiestoday.com

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

Downloaded from https:// www.studiestoday.com

Downloaded from https:// www.studiestoday.com

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

Downloaded from https:// www.studiestoday.com

Downloaded from https:// www.studiestoday.com

# ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿ ಮಿತ್ರರೆ,

ಹತ್ತನೆಯ ಇಯತ್ತೆಯ 'ಕನ್ನಡ ಸುಗಮ ಭಾರತಿ' ಈ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ಆನಂದವೆನಿಸುತ್ತದೆ.

ಮಿತ್ರರೆ, ನಿಮಗೆ ಕನ್ನಡದಲ್ಲಿ ಪರಸ್ಪರ ಒಳ್ಳೆಯ ರೀತಿಯಿಂದ ಸಂವಾದ ಮಾಡಲು ಬರಬೇಕು. ನಿಮ್ಮ ವಿಚಾರ, ಭಾವನೆ, ಕಲ್ಪನೆ ಲೇಖನದಿಂದ ಅಭಿವ್ಯಕ್ತಿ ಮಾಡಲು ಬರಬೇಕು. ಅದಕ್ಕಾಗಿ ಕನ್ನಡ ಭಾಷೆಯನ್ನು ಒಳ್ಳೆಯ ರೀತಿಯಿಂದ ಕಲಿತು, ಉತ್ತಮ ಪ್ರಕಾರ ಉಪಯೋಗಿಸಲು ಬರಬೇಕು ಎಂದು ವಿಚಾರಮಾಡಿ ಈ ಪಠ್ಯಪುಸ್ತಕದಲ್ಲಿಯ ಪಾಠಗಳ, ಅಭ್ಯಾಸಗಳ ಯೋಜನೆ ಮಾಡಲಾಗಿದೆ.

ಪಠ್ಯಪುಸ್ತಕದ ಆರಂಭದಲ್ಲಿ ಕ್ಷಮತೆಗಳ ಯಾದಿ ಕೊಡಲಾಗಿದೆ. ಅದರಿಂದ ಯಾವ ಭಾಷಿಕ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವದಿದೆ. ಎಂಬುದು ನಿಮ್ಮ ಕಲ್ಪನೆಗೆ ಬರಬಹುದು.

ಈ ಪಠ್ಯಪುಸ್ತಕದ ಅಂತರಂಗದಲ್ಲಿ ನೋಡಿದಾಗ ಅದರಲ್ಲಿ ವಿವಿಧ ಸಾಹಿತ್ಯ ಪ್ರಕಾರದ ಸಮಾವೇಶ ಮಾಡಲಾಗಿದೆ ಎಂಬುದು ನಿಮ್ಮ ಗಮನಕ್ಕೆ ಬರಬಹುದು. ಗದ್ಯಪಾಠಗಳಲ್ಲಿ ಕಥೆ, ಲಲಿತ, ವಿನೋದ ಶೈಲಿ, ಇತ್ಯಾದಿ ಪ್ರಕಾರದ ಪಾಠಗಳ ಸಮಾವೇಶ ಮಾಡಲಾಗಿದೆ. ಅದರಂತೆ ಪದ್ಯಭಾಗದಲ್ಲಿ ವೈವಿಧ್ಯಮಯ ಕವಿತೆಗಳು ಇವೆ. ಈ ಎಲ್ಲ ಪಾಠಗಳಲ್ಲಿಯ ಆಶಯ ಮತ್ತು ಭಾಷೆಗಳಲ್ಲಿಯ ವೈವಿಧ್ಯತೆ ನಿಮಗೆ ನಿಜಕ್ಕೂ ಇಷ್ಟವಾಗಬಹುದು.

ಈ ಪಠ್ಯಪುಸ್ತಕದ ಎಲ್ಲಕ್ಕಿಂತ ಮಹತ್ವದ ವೈಶಿಷ್ಟ್ಯವೆಂದರೆ ಪ್ರತಿಯೊಂದು ಪಾಠದ ಕೊನೆಗೆ ಅಭ್ಯಾಸದ ಸ್ವರೂಪ ಮತ್ತು ರಚನೆ ವೈವಿಧ್ಯ ಇವುಗಳ ಅಭ್ಯಾಸ ನಿಮಗೆ ಪಾಠದ ಅಂತರಂಗ ತಿಳಿದುಕೊಳ್ಳಲು ಸಹಾಯಕವಾಗುವುದು. ನಿಮ್ಮ ಆಕಲನಶಕ್ತಿ, ವಿಚಾರಶಕ್ತಿ, ಕಲ್ಪನಾಶಕ್ತಿ ಮತ್ತು ಸೃಜನಶೀಲತೆಗಳನ್ನು ವಿಕಸಿತ ಮಾಡುವ ಉದ್ದೇಶದಿಂದ ಅಭ್ಯಾಸ (ಸ್ವಾಧ್ಯಾಯ)ದಲ್ಲಿಯ ಕೃತಿಗಳ ರಚನೆ ಮಾಡಲಾಗಿದೆ. ಶಿಕ್ಷಕರ ಮಾರ್ಗದರ್ಶನ ಮತ್ತು ನಿಮ್ಮ ಸ್ವಯಂ ಅಧ್ಯಯನಗಳಿಂದ ಭಾಷೆಯನ್ನು ಕಲಿಯುವಾಗ ನಿಮಗೆ ಅಭ್ಯಾಸದ ಭಾರವೆನಿಸುವದಿಲ್ಲ, ಪಾಠಾಂತರದ ಭಯವೂ ಅನಿಸುವದಿಲ್ಲ.

ದೈನಂದಿನ ವ್ಯವಹಾರದಲ್ಲಿ ನಿಮಗೆ ಹೆಜ್ಜೆ ಹೆಜ್ಜೆಗೆ ಕನ್ನಡ ಭಾಷೆಯ ಉಪಯೋಗ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ನಿಮ್ಮ ಉತ್ತಮ ಸಿದ್ಧತೆಯ ಸಲುವಾಗಿ ಈ ಪಠ್ಯಪುಸ್ತಕದಲ್ಲಿ ಉಪಯೋಜಿತ ಲೇಖನದ ರೂಢಿ ಉಪಯುಕ್ತವಾಗುವದು. ಅದರೊಂದಿಗೆ ನೀವು ದೈನಂದಿನ ವ್ಯವಹಾರದಲ್ಲಿಯ ತಂತ್ರಜ್ಞಾನದ ಉಪಯೋಗ ಮಾಡಬೇಕಾಗುವದು ಅದಕ್ಕಾಗಿ ಪಾಠ್ಯಘಟಕಕ್ಕೆ ಸಂಬಂಧಿತ ಹೆಚ್ಚಿನ ಮಾಹಿತಿ ದೊರೆಯುವ ಸಲುವಾಗಿ ಸಂಕೇತ ಸ್ಥಳದ ಯಾದಿಯನ್ನೂ ಸಹ ಕೊಡಲಾಗಿದೆ. ಪ್ರತಿಯೊಂದು ಪಾಠಕ್ಕೆ ಸಂಬಂಧಿತ ಹೆಚ್ಚಿನ ಮಾಹಿತಿ ದೊರೆಯುವ ಸಲುವಾಗಿ ಆ್ಯಪ್ ಮಾಧ್ಯಮದಿಂದ ಕ್ಯೂ ಆರ್ ಕೋಡ ಮೂಲಕ ದೃಕ್‌ಶ್ರಾವ್ಯ ಸಾಹಿತ್ಯ ನಿಮಗೆ ಉಪಲಬ್ಧವಾಗಬಹುದು, ಅದು ನಿಮಗೆ ಅಭ್ಯಾಸದ ಸಲುವಾಗಿ ನಿಶ್ಚಿತವಾಗಿ ಉಪಯೋಗವಾಗಬಹುದು.

ಭಾಷಿಕ ವಿಕಾಸದೊಂದಿಗೆ ವೈಚಾರಿಕ ಕ್ಷಮತೆ, ಅಭಿವ್ಯಕ್ತಿ ಕೌಶಲ್ಯ ಮತ್ತು ಸೃಜನಶೀಲತೆಯ ವಿಕಾಸದ ಸಲುವಾಗಿ ಉಪಯುಕ್ತವಾಗುವೆನಿಸುವ ಈ ಪುಸ್ತಕವು ನಿಮಗೆ ಇಷ್ಟವಾಗಲಿದೆ ಎಂಬ ವಿಶ್ವಾಸವಿದೆ.



**(ಡಾ. ಸುನಿಲ ಮಗರ)**

**ಸಂಚಾಲಕ**

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

**ಪುಣೆ**

**ದಿನಾಂಕ : 18 ಮಾರ್ಚ, 2018 ಯುಗಾದಿ**
**ಭಾರತೀಯ ಸೌರ ದಿನಾಂಕ: 27 ಫಾಲ್ಗುಣ 1939**

Downloaded from https:// www.studiestoday.com

Downloaded from https:// www.studiestoday.com

## ಕನ್ನಡ ಸುಗಮಭಾರತಿ: ಹತ್ತನೆಯ ಇಯತ್ತೆ

| ಕ್ಷೇತ್ರಗಳು | ಕ್ಷಮತೆಗಳು |
|---|---|
| ಶ್ರವಣ | 1. ಪಠ್ಯ ಹಾಗೂ ಪಠ್ಯೇತರ ವಿವರಗಳನ್ನು ಲಕ್ಷ್ಯಪೂರ್ವಕವಾಗಿ ಕೇಳುವುದು.<br>2. ಶಾಲೆ ಹಾಗೂ ಶಾಲಾಬಾಹ್ಯ ಪರಿಸರದಲ್ಲಿ ಹಾಡು, ಕಥೆ, ಕವಿತೆ, ಸಂವಾದ ಚರ್ಚೆ ಮುಂತಾದವುಗಳನ್ನು ಲಕ್ಷ್ಯಪೂರ್ವಕವಾಗಿ ತಿಳಿದುಕೊಂಡು ಆಲಿಸುವುದು.<br>3. ದೂರದರ್ಶನದ, ಆಕಾಶವಾಣಿಯ ವಾರ್ತೆಗಳನ್ನು ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೇಳುವುದು.<br>4. ಶಾಲೆಯ ವಿಶಿಷ್ಟ ಪ್ರಸಂಗಗಳಲ್ಲಿ ನೀಡಿದ ಸೂಚನೆ, ಆಜ್ಞೆ, ವಿನಂತಿ ಮತ್ತು ಕೇಳಿದ ಪ್ರಶ್ನೆಗಳಿಗೆ ಸ್ಪಂದಿಸುವುದು.<br>5. ಮೌಖಿಕ ಸೂಚನೆ, ಆಜ್ಞೆ, ವಿನಂತಿ, ಪ್ರಶ್ನೆ, ಇತ್ಯಾದಿಗಳ ಅರ್ಥ ತಿಳಿದುಕೊಂಡು ಕೇಳುವುದು.<br>6. ವಿವಿಧ ವಿಷಯಗಳನ್ನು ಏಕಾಗ್ರತೆಯಿಂದ ಕೇಳಲು ಪ್ರಯತ್ನಿಸುವುದು. |
| ಭಾಷಣ/ ಸಂಭಾಷಣೆ | 1. ಪಠ್ಯ ಹಾಗೂ ಪಠ್ಯೇತರ ಕವಿತೆ, ದೇಶಭಕ್ತಿ ಗೀತೆ, ಜನಪದಗೀತೆ ಇತ್ಯಾದಿಗಳನ್ನು ರಾಗಬದ್ಧವಾಗಿ ಹಾಡಲು ಪ್ರಯತ್ನಿಸುವುದು.<br>2. ತಮ್ಮ ಅನುಭವ, ಕಲ್ಪನೆ, ಭಾವನೆ ಮತ್ತು ವಿಚಾರಗಳನ್ನು ಸ್ಪಷ್ಟವಾಗಿ, ಆತ್ಮವಿಶ್ವಾಸದಿಂದ ವ್ಯಕ್ತಪಡಿಸುವುದು.<br>3. ಸಂವಾದ/ಚರ್ಚೆಗಳಲ್ಲಿ ಪಾಲ್ಗೊಂಡು ಸುಸಂಗತವಾಗಿ ಮಾತನಾಡುವುದು. ಕೇಳಿದ ಪ್ರಶ್ನೆಗಳಿಗೆ ಯೋಗ್ಯ ಉತ್ತರಗಳನ್ನು ಕೊಡುವುದು. |
| ವಾಚನ | 1. ಪರಿಸರದಲ್ಲಿಯ ವಿವಿಧ ವಿವರಗಳನ್ನು ತಿಳಿದುಕೊಂಡು ಓದುವುದು. ಇತರರಿಗೆ ತಿಳಿಸುವುದು.<br>2. ಪಠ್ಯ ಹಾಗೂ ಪಠ್ಯೇತರ ಪುಸ್ತಕಗಳಲ್ಲಿಯ ಮುದ್ರಿತ ಹಾಗೂ ಹಸ್ತಲಿಖಿತ ವಿವರಗಳನ್ನು ತಿಳಿದುಕೊಂಡು ಪ್ರಕಟವಾಚನ ಮಾಡುವುದು.<br>3. ಆಯ್ದ ಲೇಖನ ಭಾಗಗಳ ಅರ್ಥ ತಿಳಿದುಕೊಂಡು ಪ್ರಕಟವಾಚನವನ್ನು ನಿರ್ದಿಷ್ಟ ವೇಳೆಯಲ್ಲಿ ಏಕಾಗ್ರತೆಯಿಂದ ಮಾಡುವದು. ಕ್ರಮವಾಗಿ ವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು. |
| ಲೇಖನ | 1. ಸ್ವಯಂಲೇಖನ ಕಲೆಯನ್ನು ಮೈಗೂಡಿಸಿಕೊಳ್ಳುವುದು.<br>2. ಲೇಖನದ ನಿಯಮಗಳನ್ನು ತಿಳಿದುಕೊಂಡು ಶ್ರುತಲೇಖನ ಮಾಡುವುದು. ಆಗುವ ತಪ್ಪುಗಳ ಗಡೆಗೆ ವಿಶೇಷ ಲಕ್ಷ್ಯವಹಿಸಿ ತಪ್ಪುಗಳನ್ನು ಕೂಡಲೇ ತಿದ್ದಿಕೊಳ್ಳಲು ಪ್ರಯತ್ನಿಸುವುದು.<br>3. ಸುಂದರ ಹಾಗೂ ಶುದ್ಧಬರಹ ಕಲೆಯನ್ನು ಮೈಗೂಡಿಸಿಕೊಳ್ಳುವುದು<br>4. ಆಲಿಸಿದ ಹಾಗೂ ಓದಿದ ಭಾಗದ ಮೇಲೆ ಕೇಳಿದ ಪ್ರಶ್ನೆಗಳಿಗೆ ಸ್ವತಃ ಉತ್ತರಗಳನ್ನು ಬರೆಯುವುದು.<br>5. ಎಂಟರಿಂದ ಹತ್ತು ಸಾಲುಗಳವರೆಗೆ ತಮ್ಮ ವಿಚಾರ, ಭಾವನೆ ಮತ್ತು ಕಲ್ಪನೆಗಳನ್ನು ಬರೆಯಲು ಹೇಳುವುದು.<br>6. ಕೊಟ್ಟ ಪರಿಚ್ಛೇದವನ್ನು 1/3 ದಷ್ಟು ಸಂಕ್ಷಿಪ್ತಗೊಳಿಸಿ ಬರೆಯುವುದು. |
| ಅಧ್ಯಯನ ಕೌಶಲಗಳು | 1. ವಿವಿಧ ವಿಷಯಗಳನ್ನು ಏಕಾಗ್ರತೆಯಿಂದ ಕೇಳಲು ಪ್ರಯತ್ನಿಸುವುದು.<br>2. ಹೊಸ ಶಬ್ದ ವಾಕ್ಯರಚನೆ ಅಲ್ಲದೆ ಹೊಸ ವಿಷಯಗಳ ಕುರಿತು ಆಕಲನ ಮಾಡಿಕೊಳ್ಳುವುದು.<br>3. ಚರ್ಚೆ/ಸಂವಾದಗಳಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು.<br>4. ಅಪೇಕ್ಷಿತ ಕೃತಿಗಳನ್ನು ನಿರ್ದಿಷ್ಟ ಸಮಯದಲ್ಲಿ ಮಾಡುವ ಕೌಶಲವನ್ನು ಬೆಳೆಸಿಕೊಳ್ಳುವುದು.<br>5. ಸ್ಪಷ್ಟ ಉಚ್ಚಾರ ಹಾಗೂ ಯೋಗ್ಯ ಧ್ವನಿಯ ಏರಿಳಿತದೊಂದಿಗೆ ಪಠ್ಯೇತರ ಹಾಡು, ಕವಿತೆಗಳನ್ನು ಹಾಡುವುದು. ಕಥೆಗಳನ್ನು ಹೇಳುವುದು.<br>6. ಪಠ್ಯ ಹಾಗೂ ಪಠ್ಯೇತರ ಹಾಡು, ಕವಿತೆಗಳನ್ನು ರಾಗ, ತಾಳ ಮತ್ತು ಲಯದೊಂದಿಗೆ ಹಾಡುವುದು. ಹಸ್ತಲಿಖಿತ ಹಾಗೂ ಮುದ್ರಿತ ವಿವರಗಳನ್ನು ಯೋಗ್ಯ ಉಚ್ಚಾರದೊಂದಿಗೆ ಓದುವುದು.<br>7. ಪ್ರಕಟವಾಚನದ ಹಾಗೂ ಮೌನವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು. ಶ್ರುತಲೇಖನದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು.<br>8. ದೈನಂದಿನ ಭಾಷಿಕ ಕೊಡು-ಕೊಳ್ಳುವಿಕೆಯಲ್ಲಿ ಮಾಹಿತಿ ತಂತ್ರಜ್ಞಾನದ ಉಪಯೋಗ ಮಾಡುವುದು.<br>9. ವಿವಿಧ ಪ್ರಕಾರದ ಸಾಹಿತ್ಯ, ಕಲೆಗಳನ್ನು, ತಿಳಿದುಕೊಂಡು, ಅನುಭವ ವಿಶ್ವದ ಪರಿಚಯ ಮಾಡಿಕೊಳ್ಳುಶುದು.<br>10. ಸಂಗಣಕದ ಸಹಾಯದಿಂದ Graphics, Word art, Graps, Picrograms ಇತ್ಯಾದಿಗಳನ್ನು ತಯಾರಿಸಲು ಬರುವುದು.<br>11. ಸಂಗಣಕೀಯ ಸಹಾಯದಿಂದ ಸಾದರೀಕರಣ ಮಾಡಲು ಬರುವುದು.<br>12. ಸಂಗಣಕೀಯ ಶಿಷ್ಟಾಚಾರವನ್ನು ತಿಳಿದುಕೊಳ್ಳುವುದು. ಉದಾ. ಬೇರೆಯವರ ಪಾಸವರ್ಡಗಳನ್ನು ನೋಡಬಾರದು.<br>13. ಪ್ರಸಾರ ಮಾಧ್ಯಮಗಳು/ಸಂಗಣಕ ಮುಂತಾದವುಗಳ ಮೇಲಿಂದ ಉಪಲಬ್ಧವಿರುವ ಕಲಾಕೃತಿಗಳ ಆಸ್ವಾದವನ್ನು ಮಾಡಲು ಬರುವುದು, ಚಿಕಿತ್ಸಕ ವಿಚಾರ ಮಾಡಲು ಬರುವುದು.<br>14. ಸಂಗಣಕ/ಇಂಟರನೆಟದ ಸಹಾಯದಿಂದ ಭಾಷಾಂತರ/ಲಿಪ್ಯಂತರ ಮಾಡಲು ಬರುವುದು. |

Downloaded from https:// www.studiestoday.com

Downloaded from https:// www.studiestoday.com

# ಪರಿವಿಡಿ

## ಪದ್ಯ ವಿಭಾಗ


| ಅ.ನಂ. | ಪದ್ಯಗಳು | ಕವಿ/ಲೇಖಕರು | ಪುಟ |
|---|---|---|---|
| 1. | ಹಡೆದವ್ವ | ಜನಪದರು | 1 |
| 2. | ಶಿವಯೋಗ ಮಂದಿರ | ಡಿ.ಎಸ್. ಕರ್ಕಿ | 4 |
| 3. | ಶ್ರಾವಣ ವೈಭವ | ದ.ರಾ. ಬೇಂದ್ರೆ | 6 |
| 4. | ವಚನಗಳು | ಬಸವಣ್ಣನವರು | 9 |
| 5. | ನಿನ್ನ ದಯವಾಗಲಿ ಹರಿಯೆ | ಶ್ರೀ ಪಾದರಾಯರು | 11 |


## ಗದ್ಯ ವಿಭಾಗ


| | | | |
|---|---|---|---|
| 1. | ಸದ್ಗುಣ | - | 14 |
| 2. | ಮಾವಿನ ಮರ ಸಾಕ್ಷಿ ಹೇಳಿದ್ದು | - | 19 |
| 3. | ಜೌತಣಕ್ಕೆ ಕರೆ | - | 24 |
| 4. | ಮಾವಕೊಟ್ಟ ರೇಡಿಯೋ | - | 29 |
| 5. | ನ್ಯಾಯಮಂತ್ರಿ | - | 35 |


## ವ್ಯಾಕರಣ ವಿಭಾಗ


| | | | |
|---|---|---|---|
| 1. | ಸರ್ವನಾಮಗಳು | - | 41 |
| 2. | ವಿಶೇಷಣಗಳು | - | 42 |
| 3. | ವಿಭಕ್ತಿ ಪ್ರತ್ಯಯಗಳು | - | 43 |
| 4. | ವಾಕ್ಯ ಪ್ರಕಾರಗಳು | - | 43 |
| 5. | ಪಡೆನುಡಿಗಳು | - | 44 |
| 6. | ನಿಬಂಧ ಬರಹ | - | 45 |
| 7. | ಕಥೆ ರಚನೆ | - | 46 |
| 8. | ಪತ್ರ ಲೇಖನ | - | 47 |
| 9. | ಆಮಂತ್ರಣ ಪತ್ರಿಕೆ | - | 48 |


Downloaded from https:// www.studiestoday.com

Downloaded from https:// www.studiestoday.com

# ಪದ್ಯ ವಿಭಾಗ

Downloaded from https:// www.studiestoday.com

Downloaded from https:// www.studiestoday.com

# 1. ಹಡೆದವ್ವ

– ಜನಪದರು

(ಜನಸಾಮಾನ್ಯರು ರಚಿಸಿದ ಜನಪದ ಸಾಹಿತ್ಯ ವಿಪುಲವೂ ವೈವಿಧ್ಯಪೂರ್ಣವೂ ಆದುದಾಗಿದೆ. ಜನಪದರು ತಮ್ಮ ಬದುಕಿನ ಅನುಭವಗಳಿಗೆ ಬಣ್ಣತುಂಬಿದ್ದು, ಆಕಾರ ನೀಡಿದ್ದು ಈ ಸಾಹಿತ್ಯದ ಮೂಲಕ. ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಪಾಮರ ಸಾಹಿತ್ಯವೆನಿಸಿದ ಇದರ ಸೃಷ್ಟಿಕಾರ್ಯ ಪುರುಷ ಹಾಗೂ ಮಹಿಳೆ ಇಬ್ಬರಿಂದಲೂ ನಡೆದಿದೆ. ಜನಪದ ಸಾಹಿತ್ಯದಲ್ಲಿ ತ್ರಿಪದಿಯೇ ಪ್ರಮುಖವಾದುದಾಗಿರುತ್ತದೆ. ಬಿಡಿರಚನೆಗಳಾದ ಈ ತ್ರಿಪದಿಯಲ್ಲಿ ಜನಪದರು ತಮ್ಮ ಬದುಕಿನ ಸರಸ-ವಿರಸ, ಸುಖ-ದುಃಖ, ನೊವು-ನಲಿವು, ಪ್ರೀತಿ-ವಾತ್ಸಲ್ಯ, ಆಸರಿಕೆ-ಬೇಸರಿಕೆ ಮೊದಲಾದ ಅನುಭವಗಳನ್ನು ಪ್ರಕಟಪಡಿಸಿದ್ದಾರೆ).

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ ।
ಕೂಸು ಕಂದಯ್ಯ ಒಳಹೊರಗ । ಆಡಿದರ ।
ಬೀಸಣಿಕೆ ಗಾಳಿ ಸುಳಿದಾವ ॥1॥

ತಂದೀಯ ನೆನೆದರ ತಂಗಳ ಬಿಸಿಯಾಯ್ತು ।
ಗಂಗಾದೇವಿ ನನ್ನ ಹಡೆದವ್ವ । ನೆನೆದರ ।
ಮಾಸೀದ ತಲೆಯು ಮಡಿಯಾಯ್ತು ॥2॥

ಹೆಣ್ಣಿದ್ದ ಮನೆಗೆ ಕನ್ನಡಿ ಯಾತಕ್ಕ ।
ಹೆಣ್ಣು ಸಣ್ಣವಳು ಒಳಗಿರಲು । ನನ ಮಗಳು ।
ಕನ್ನಡಿಯಂಗ ಹೊಳೆಯುವಳು ॥3॥

ಬಡವೆಯ ಮಕ್ಕಳು ನಡೆದರೆ ಸಂತೋಷ ।
ಹುಡಿಯಾಡಿ ಮನೆಗೆ ಬರುವಾಗ । ತಾಯಿಗೆ ।
ಬಡತನದ ಜಾನ ಮರೆಯಿತು ॥4॥

ಜನಕರಾಯನ ಮಗಳು ಬನಕ ತೊಟ್ಟಿಲ ಕಟ್ಟಿ ।
ಲವಕುಶರನ್ನು ತೂಗ್ಯಾಳೊ । ಸೀತಾದೇವಿ ।
ನಗುತ ವನವಾಸ ಕಳದಾಳ ॥5॥

ತಾಯವ್ವನ ಬೈಬ್ಯಾಡ ತಿಳಿಗೇಡಿ ನನ ತಮ್ಮ ।
ಬಾಳ ದಿನದಾಕಿ ಹಡೆದವ್ವಗ । ಬೈದರ ।
ಬಾಳ ಮರುಗ್ಯಾಳ ಮನದಾಗ ॥6॥





Downloaded from https:// www.studiestoday.com

Downloaded from https:// www.studiestoday.com

**ಶಬ್ದಗಳ ಅರ್ಥ:**

ಬೀಸಣಿಕೆ = ಗಾಳಿ ಹಾಕಿಕೊಳ್ಳುವ ಸಾಧನ; ಮಾಸಿದ = ಹೊಲಸಾದ; ಹುಡಿಯಾಡು = ದೂಳಿನಲ್ಲಿ ಆಡು;
ಮರುಗು = ಕಳವಳಗೊಳ್ಳು

## ಅಭ್ಯಾಸ

**ಪಠ್ಯಾಧಾರಿತ ಪದ್ಯವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಮಾಡಿರಿ.**

**ಕೃತಿ 1) ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**


1) ಕೂಸು ಇದ್ದ ಮನಿಗೆ ಯಾವುದು ಬೇಡ?

2) ಹಡೆದವ್ವನನ್ನು ಯಾವ ನದಿಗೆ ಹೋಲಿಸಲಾಗಿದೆ?

3) ಸೀತಾದೇವಿಯ ಮಕ್ಕಳು ಯಾರು?

4) ತಾಯವ್ವನು ಮರುಗಬಾರದೆಂದು ತಮ್ಮನು ಹೇಗೆ ನಡೆದುಕೊಳ್ಳಬೇಕು?

**ಕೃತಿ 2) ಪದ್ಯದಲ್ಲಿ ಬಂದಿರುವ ಗ್ರಾಮ್ಯ ಶಬ್ದಗಳನ್ನು ಹುಡುಕಿ ಬರೆಯಿರಿ.**




**ಕೃತಿ 3) I. ಮಗುವಿನ ಪ್ರೇಮವು ತಾಯಿಯ ಯಾವ ಯಾವ ಮಾತುಗಳಲ್ಲಿ ವ್ಯಕ್ತವಾಗಿವೆ ಬರೆಯಿರಿ.**

1) ..........................................................................................................

2) ..........................................................................................................

3) ..........................................................................................................

4) ..........................................................................................................

**II. ''ತಾಯಿಯೇ ದೇವರು'' ಈ ಹೇಳಿಕೆಯನ್ನು ನಿಮ್ಮ ಮಾತುಗಳಲ್ಲಿ 8 ರಿಂದ 10 ವಾಕ್ಯಗಳಲ್ಲಿ ಸ್ಪಷ್ಟಪಡಿಸಿರಿ.**

**III.**

1) ಜನಕ ರಾಜನ ಮಗಳು ಜಾನಕಿಯಾದರೆ

2) ದ್ರುಪದ ರಾಜನ ಮಗಳು ........................................

3) ಕುಂತಲ ರಾಜನ ಮಗಳು ........................................

4) ಗಾಂಧಾರ ರಾಜನ ಮಗಳು ........................................



Downloaded from https:// www.studiestoday.com

Downloaded from https:// www.studiestoday.com

ಕೃತಿ 4) I. ಕೆಳಗೆ ಕೊಟ್ಟಿರುವ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

ಕೂಸು, ಮಾಸೀದ, ಹುಡಿಯಾಡಿ, ತೂಗ್ಯಾಳೂ, ಕಳದಾಳ ಮರಗ್ಯಾಳ

II. ಕೆಳಗಿನ ಶಬ್ದಗಳಿಗೆ ತತ್ಸಮ ತದ್ಭವ ಬರೆಯಿರಿ.

ರೂಪ, ವರುಷ, ಕಬ್ಬ, ಬ್ರಹ್ಮ

III. ಉಪಸರ್ಗಯುಕ್ತ ಪದಗಳನ್ನು ಬರೆಯಿರಿ

ಯೋಗ, ಬಲ, ಲೋಕ

IV. ಕೆಳಗಿನ ವಾಕ್ಯದ ಪ್ರಯೋಗ ಬರೆಯಿರಿ

ಲವಕುಶರು, ಕುದುರೆಯನ್ನು ಕಟ್ಟಿದರು.

ಕೃತಿ 5) I. ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ ಭಾಷಣ ಸ್ಪರ್ಧೆಯಲ್ಲಿ ನೀವು ವಿಜೇತರಾದ ಬಗ್ಗೆ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.

II. ನಿನಗೆ ಗೊತ್ತಿರುವ ಯಾವುದಾದರೂ ಎರಡು ಜಾನಪದ ತ್ರಿಪದಿಗಳನ್ನು ಬರೆಯಿರಿ.

***

8QD3SY



Downloaded from https:// www.studiestoday.com


Downloaded from https:// www.studiestoday.com

# 2. ಶಿವಯೋಗ ಮಂದಿರ

– ಡಿ.ಎಸ್. ಕರ್ಕಿ

(ಕವಿ ಪರಿಚಯ: ಡಿ.ಎಸ್. ಕರ್ಕಿ ಇವರ ಪ್ರಮುಖವಾದ ಕಾವ್ಯಧೋರಣೆ ಕನ್ನಡ ನಾಡಿನ ನೈಸರ್ಗಿಕ ಸೌಂದರ್ಯ, ಲಲಿತ ಕಲೆಗಳ ಮೇಲ್ಮೆ, ಇತಿಹಾಸ ಉಜ್ವಲತೆ ಮತ್ತು ಪುಣ್ಯಕ್ಷೇತ್ರಗಳನ್ನು ಅವುಗಳ ವೈಶಿಷ್ಟ್ಯಗಳೊಂದಿಗೆ ಪರಿಚಯ ಮಾಡಿಕೊಡುವುದಾಗಿದೆ. ಇವರು ಕೆಲವು ಮಕ್ಕಳ ಗೀತೆಗಳನ್ನೂ ರಚಿಸಿದ್ದಾರೆ. ಇವರು ಬರೆದ ಸಂಶೋಧನ ಗ್ರಂಥ 'ಕನ್ನಡ ಛಂದೋವಿಕಾಸ' ಒಂದು ಮೌಲಿಕ ಆಧಾರ ಗ್ರಂಥ. 'ನಕ್ಷತ್ರಗಾನ' ತನನತೊಂ 'ಬಣ್ಣದ ಚೆಂಡು' ಮುಂತಾದವು ಇವರ ಇತರ ಕೃತಿಗಳು.

''ಶಿವಯೋಗ ಮಂದಿರ'' ಮಲಪ್ರಭಾ ನದಿಯ ದಂಡೆಯ ಮೇಲೆ ಆಧ್ಯಾತ್ಮವಿದ್ಯೆಗೆಂದು ನಿರ್ಮಿತವಾದ ಒಂದು ಪೀಠ. ಇದು ಗುರುಕುಲ ಸಂಪ್ರದಾಯದ ಬಗೆಯಲ್ಲಿದೆ. ಇದರ ಸುತ್ತಲಿನ ನಿಸರ್ಗಶೋಭೆ, ಶಾಂತಿಯ ನೆಲಸು, ತಪೋಭೂಮಿಯ ಬದುಕು-ಬೆಳಕನ್ನು ಹೊಮ್ಮಿಸಿದೆ. ಈ ವಿಷಯವು ಪ್ರಸ್ತುತ ಕವಿತೆಯಲ್ಲಿ ಸಾಕಾರಗೊಂಡಿದೆ. ಇದನ್ನು ''ಭಾವ ತೀರ್ಥ'' ಸಂಗ್ರಹದಿಂದ ಆಯ್ದು ಸಂಪಾದಿಸಲಾಗಿದೆ).



ಇದೊ ಮಂದಿರ ಶಿವ ಮಂದಿರ
ಶಿವಯೋಗದ ಮಂದಿರ
ಪ್ರಕೃತಿಯ ಪರಮಾನಂದದ
ಸುಧೆ ಸೂಸುವ ಚಂದಿರ. –1–

ಸುತ್ತಲು ಸುಳಿದೆದ್ದಿವೆ ಕಿರಿ
ಕಾನನಗಳು ದಿಟ್ಟಿಗೆ
ಮೌನದೊಂದು ಸಂಗದಿ ಕಳೆ
ಬಂದಿದೆ ಶಿವಸೃಷ್ಟಿಗೆ
ಕಾನನದೀ ಮೌನದಲ್ಲಿ
ಶೃತಿಗೂಡುವ ತಾನದಲ್ಲಿ
ತನ್ನದೆ ಸುಖ-ಗಾನದಲ್ಲಿ
ತೇಲಿಸಿ ತಿಳಿಯೊಲವನು
ರಚಿಸುವಳು ಮಲಾಪಹಾರಿ
ತೆರ ತೆರನಹ ಚೆಲುವನು –2–

ಜಲ ಮಡುಗಟ್ಟಿದ ಈ ದಡ-
ದಲ್ಲಿ ನೆಲಸಿದೆ ಸೌಂದರ
ಲತೆ ಲತೆ ಜತೆಗೂಡಿ ನೆಳಲ
ನೆಯ್ದಿಕ್ಕಿದೆ ಹಂದರ
ಕುಳ್ಳಿರು ಈ ತಂಪಿನಲ್ಲಿ
ಒಂದಾಗುತ ಸೊಂಪಿನಲ್ಲಿ
ತೇಲಲಿ ಎದೆ ತಂಪಿನಲ್ಲಿ
ನೈರ್ಮಲ್ಯದ ಸಂಗಕೆ
ಕರ್ಕಶ ಕಾಠಿಣ್ಯವೆಲ್ಲ
ಕರಗುವ ರಸರಂಗಕೆ –3–



Downloaded from https:// www.studiestoday.com

Downloaded from https:// www.studiestoday.com

### ಶಬ್ದಗಳ ಅರ್ಥ

ಕಾನನ - ಅಡವಿ, ಅರಣ್ಯ; ಸಂಗ - ಸಹವಾಸ, ಮಲಾಪಹಾರಿ - ಮಲಪ್ರಭಾ ನದಿಗೆ ಇರುವ ಇನ್ನೊಂದು ಹೆಸರು; ಸೊಂಪು - ಹಿಗ್ಗು, ಚೆಲುವು; ತಾನ - ಸ್ವರ ವಿಸ್ತಾರ ಆಲಾಪ.

### ವಿಶೇಷ ವಿಚಾರ -

1) ಶಿವಸೃಷ್ಟಿ - ಶಿವನ ಸೃಷ್ಟಿಯೆಂದೂ, ಆನಂದದ ನೆಲೆಯೆಂದೂ ಅರ್ಥ

2) ರಸರಂಗ - 'ರಸ' ಎಂಬುದಕ್ಕೆ ಸೌಂದರ್ಯ ಮತ್ತು ಆನಂದ ಎಂದು ಎರಡು ಅರ್ಥ. 'ರಸರಂಗ' ಎಂದರೆ ಈ ಭಾವಗಳು ರಂಜಿಸುವ ನೆಲೆ

## ಅಭ್ಯಾಸ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಶಿವಯೋಗ ಮಂದಿರ ಯಾವ ಚಂದಿರವಾಗಿದ್ದಾನೆ?

2) ಶಿವಯೋಗ ಮಂದಿರದ ಸುತ್ತಲು ಏನು ಸುಳಿದೆದ್ದಿವೆ?

3) ಯಾವುದು ಹಂದರ ನೆಯ್ದಿಕ್ಕಿದೆ?

**ಕೃತಿ 2) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

1) ತೇಲಿಸು x

2) ಕರ್ಕಶ x

3) ಕಠಿಣ x

4) ಸುಂದರ x

**ಕೃತಿ 3) ಒಂದು ದಿನ ರಜೆ ನೀಡುವಂತೆ ನಿಮ್ಮ ವರ್ಗ ಶಿಕ್ಷಕರಿಗೆ ಅರ್ಜಿ ಬರೆಯಿರಿ.**

**ಕೃತಿ 4) ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿರಿ.**

ತಾನದಲ್ಲಿ, ದಿಟ್ಟಿಗೆ, ಸಂಗಕ್ಕೆ, ಸುಧೆಯ

**ಕೃತಿ 5) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ.**

ಕಾನನ, ಸಂಗ, ರಚಿಸು, ನಿರ್ಮಲ

***

92RC9I



Downloaded from https:// www.studiestoday.com

Downloaded from https:// www.studiestoday.com

# 3. ಶ್ರಾವಣ ವೈಭವ

– ದ.ರಾ. ಬೇಂದ್ರೆ

(ಕವಿ ಪರಿಚಯ: ಈ ಪದ್ಯಭಾಗವನ್ನು ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಬರೆದಿರುವ 'ಸಖೀಗೀತ' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ. ಇವರ ಕಾವ್ಯನಾಮ 'ಅಂಬಿಕಾತನಯದತ್ತ' ಎಂದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ದ. ರಾ. ಬೇಂದ್ರೆ ಅವರು ಬರೆದ ಪದ್ಯಗಳು ವೈಶಿಷ್ಟ್ಯಪೂರ್ಣವಾದುವು. 'ದೇಶೀ'ಯ ಸೊಬಗು, ಬೆಡಗು, ಬಿನ್ನಾಣಗಳು ಇವರ ಪದ್ಯಗಳ ಪ್ರಧಾನ ಲಕ್ಷಣಗಳು. ಸರಳವಾದ ಪದಬಳಕೆಯ ಆಡುಮಾತು ಕೂಡು ನುಡಿಗಳೇ ಮೊದಲಾದವುಗಳು ಸಹಜ ಕವಿತೆಗಳಾಗಿ ಇವರ ಲೇಖನಿಯಿಂದ ಮೂಡಿ ಹೊರಬರುತ್ತವೆ. ಇವರು ಸೂರ್ಯಪಾನ, ಗರಿ, ನಾದಲೀಲೆ ಮುಂತಾದ ಅನೇಕ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ 'ಅರಳು ಮರಳು' ಎಂಬ ಕವನ ಸಂಕಲನಕ್ಕೆ ಭಾರತ ಸರಕಾರದ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರಕಿದೆ. ಮೈಸೂರು ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿದೆ. 1943ರಲ್ಲಿ ಶಿವಮೊಗ್ಗದಲ್ಲಿ ನಡೆದ 27ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿದ್ದರು. ಇವರ ನಾಕು ತಂತಿ ಕವನ ಸಂಕಲನಕ್ಕೆ 'ಜ್ಞಾನಪೀಠ' ಪ್ರಶಸ್ತಿ ದೊರಕಿದೆ.

ಶ್ರಾವಣ ಮಾಸದಲ್ಲಿ ಪ್ರಕೃತಿಯ ಸೊಬಗು ಅತ್ಯಂತ ಮನೋಹರವಾಗಿರುತ್ತದೆ. ತಾವು ಕಂಡ ಆ ಮನೋಹರ ಸ್ವರೂಪವನ್ನು ಈ ಪದ್ಯದಲ್ಲಿ ವ್ಯಕ್ತಪಡಿಸಿದ್ದಾರೆ).

ಏನು ಹಸಿರು ! ಏನು ಹಳದಿ !
ಸುತ್ತ ಮುತ್ತ ನೋಡು ಕೆಳದಿ ॥ ಪಲ್ಲ ॥

ಹುಲ್ಲ ಹೂವು ಆದರೇನು,
ಹಬ್ಬದುಬ್ಬಿ ನಲ್ಲಿವೆ;
ದಿಬ್ಬಗಳನು ತಬ್ಬಲೆಂದು
ಎಲ್ಲ ನೆಲಕು ಹಬ್ಬಿವೆ.

ಮಳೆಯ ಬಿಲ್ಲು ಮುರಿದು ಹತ್ತು
ಕಡೆಗು ಹಂಚಿದಂತಿದೆ;
ಹುಲ್ಲು ಕಸವು ಬಣ್ಣ ಬಡೆದು
ಹೂತು ಹಿಗ್ಗಿ ನಿಂತಿದೆ.

ನೆಲದ ಬಸಿರ ರತ್ನ ರತ್ನ,
ತನ್ನ ಸೊಬಗ ಕಳಿಸಿದೆ;
ಬಣ್ಣದೊಂದು ಜಾತ್ರೆಗಾಗಿ
ತನ್ನ ಪಯಣ ಬೆಳೆಸಿದೆ.

ಮಣ್ಣು ಹುಡಿಯ ಕಣಕಣವೂ,
ಕಣ್ಣು ಪಡೆದ ಹಾಗಿದೆ.
ಬಾನಿನಂಚಿನಲ್ಲಿ ಮೋಡ,
ನೋಡಲಿದನೆ ಬಾಗಿದೆ.





Downloaded from https:// www.studiestoday.com

Downloaded from https:// www.studiestoday.com

ಮುಗಿಲು ನೆಲಕೆ ಮುಕ್ಕು ಚಿಕ್ಕೆ
ಕಾಳುಗಳನು ಬಿತ್ತಿದೆ;
ನೆಲವು ಮುಗಿಲಿಗರ್ತಿಯಿಂದ
ಆರತಿಯೆನ್ನೆತ್ತಿದೆ

ಬಸಿರೆ ಹೊಲಕೆ[2] ಹೂವು ಮುಡಿಸ
ಲೆಂದು ಬಂದ ಸಂಭ್ರಮ;
ಸೃಷ್ಟಿಯಲ್ಲೆ ಕಾಣತಿಹುದು,
ಮುನುಜನೆತ್ತಿದೀ ಕ್ರಮ.

---

## ಶಬ್ದಗಳ ಅರ್ಥ

ಕೆಳದಿ-ಗೆಳತಿ; ಉಬ್ಬು - ಏರು; ದಿಟ್ಟ - ದಿನ್ನೆ; ತಬ್ಬು - ಅಪ್ಪು; ಪಯಣ - ಪ್ರಯಾಣ

## ವಿಶೇಷ ವಿಚಾರ

ಮುಕ್ಕು = ಒಂದು ಮುಷ್ಟಿ, ಬಸಿರೆ ಹೊಲ = ಗರ್ಭಿಣಿಯಾದ ಭೂಮಿ. (ಭೂಮಿ ಗರ್ಭಿಣಿಯಾದಂತೆ ತಿಳಿದು ಹೂ ಮುಡಿಸುವ ಕಾರ್ಯವನ್ನು ಆ ಭಾಗದ ಜನರು ಮಾಡುತ್ತಾರೆ. ಅದನ್ನೇ ಜ್ಞಾಪಿಸಿಕೊಂಡು ಕವಿಯು ಕವಿತೆ ಬರೆದಿದ್ದಾರೆ.)

## ಅಭ್ಯಾಸ

**ಕೃತಿ 1)** ಶ್ರಾವಣ ಮಾಸದಲ್ಲಿ ಕಾಣುವ ಪ್ರಕೃತಿ ಸೌಂದರ್ಯವನ್ನು ಕವಿ ಹೇಗೆ ವರ್ಣಿಸಿದ್ದಾನೆ ಎಂಬುದನ್ನು ಬರೆಯಿರಿ



Downloaded from https:// www.studiestoday.com

Downloaded from https:// www.studiestoday.com

**ಕೃತಿ 2) ಕೆಳಗೆ ಕೊಟ್ಟ ಶಬ್ದಗಳಿಂದ ವಾಕ್ಯ ಪೂರ್ಣಮಾಡಿರಿ.**

(ಸಂಭ್ರಮ, ಬೆಳೆಸಿದ, ಹಬ್ಬಿವೆ, ಕೆಳದಿ)

1) ಏನು ಹಸಿರು! ಏನು ಹಳದಿ ಸುತ್ತ ಮುತ್ತ ನೋಡು

2) ದಿಬ್ಬಗಳನ್ನು ತಬ್ಬಲೆಂದು ಎಲ್ಲ ನೆಲಕು

3) ಬಣ್ಣದೊಂದು ಜಾತ್ರೆಗಾಗಿ ತನ್ನ ಪಯಣ

4) ಬಸಿರೆ ಹೊಲಕೆ ಹೂವು ಮುಡಿಸಲೆಂದು ಬಂದ

**ಕೃತಿ 3) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ.**

1) ಮುಡಿಸು, ಬಾಗಿದೆ, ಸೊಬಗು, ಜಾತ್ರೆ

**ಕೃತಿ 4) ಈ ಪದ್ಯದ ಸಾರಾಂಶ ನಿನ್ನ ಮಾತುಗಳಲ್ಲಿ ಬಣ್ಣಿಸಿರಿ.**

**ಕೃತಿ 5) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಕಣ್ಣು ಪಡೆದ ಹಾಗಿರುವುದು ಯಾವುದು?

2) ಮುಗಿಲು ನೆಲಕೆ ಏನನ್ನು ಬಿತ್ತಿದೆ?

3) ಬಾನಿನಲ್ಲಿ ಮೋಡವು ಏಕೆ ಬಾಗಿದೆ?

***

931886



Downloaded from https:// www.studiestoday.com

Downloaded from https:// www.studiestoday.com

# 4. ವಚನಗಳು

**ಕವಿ ಪರಿಚಯ :** ಬಸವಣ್ಣನವರು 12ನೇ ಶತಮಾನದಲ್ಲಿ ಆಗಿ ಹೋದ ಸಮಾಜ ಸುಧಾರಕರು. ಇವರು ಹುಟ್ಟೂರು ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ. ಮಾದರಸ ಮಾದಲಾಂಬಿಕೆಯರು ಇವರ ಮಾತಾಪಿತೃಗಳು. ಇವರು ಮಲಾಪಹಾರಿ ಮತ್ತು ಕೃಷ್ಣಾ ನದಿಗಳ ಸಂಗಮ ಸ್ಥಳವಾದ 'ಕಪ್ಪಡಿ ಸಂಗಮ' ಎಂಬ ಸ್ಥಳದಲ್ಲಿದ್ದ ಜಾತವೇದ ಮುನಿಗಳೆಂಬವರಲ್ಲಿ ವಿದ್ಯಾಭ್ಯಾಸ ಮಾಡಿ ಪ್ರೌಢ ವಯಸ್ಸಿನಲ್ಲಿ ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಲಚೂರ್ಯ ಬಿಜ್ಜಳನ ಕರಣಿಕರಾಗಿ, ಮಂತ್ರಿಯಾಗಿ ಕೆಲಸ ಮಾಡಿದರೆಂದು ತಿಳಿದುಬರುವುದು. ಕೂಡಲಸಂಗಮದೇವ ಎಂಬ ಅಂಕಿತನಾಮದಿಂದ ಕನ್ನಡದಲ್ಲಿ ಅಸಂಖ್ಯಾತ ವಚನಗಳನ್ನು ರಚಿಸಿದ್ದಾರೆ.

ಈ ವಚನಗಳಲ್ಲಿ ಅತ್ಮ ಶುದ್ಧಿ, ದೇಹಶುದ್ದಿ, ವಾಕ್‌ಶುದ್ಧಿ ವಿನಯಗುಣ, ಬೇಡದಿರುವಿಕೆ ಮುಂತಾದ ಗುಣಗಳು ಮನುಷ್ಯನ ಉದ್ದಾರಕ್ಕೆ ಅವಶ್ಯಕ ಎಂಬ ಅಂಶ ವ್ಯಕ್ತವಾಗುತ್ತದೆ.

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ
ಘೋರ ತಪವ ಮಾಡಿದೊಡೇನು? ಅಂತರಂಗ ಆತ್ಮಶುದ್ಧಿ
ಯಿಲ್ಲದವರನೆಂತು ನಂಬುವನಯ್ಯ ಕೂಡಲ ಸಂಗಮದೇವ? ॥ 1 ॥

ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡಲಿ?
ಬಡವನಯ್ಯ! ಎನ್ನ ಕಾಲೇಕಂಬ ದೇಹವೇ ದೇಗುಲ;
ಶಿರವೇ ಹೊನ್ನ ಕಲಶವಯ್ಯ ಕೂಡಲ ಸಂಗಮದೇವ ಕೇಳಯ್ಯ!
ಸ್ಥಾವರಕ್ಕಳಿವುಂಟು; ಜಂಗಮಕ್ಕಳಿವಿಲ್ಲ. ॥ 2 ॥



ಕಂಡಭಕ್ತರಿಗೆ ಕೈಮುಗಿಯುವಾತನೇ ಭಕ್ತ
ಮೃದು ವಚನವೇ ಸಕಲ ಜಪಂಗಳಯ್ಯ,
ಸದುವಿನಯವೇ ಸದಾಶಿವನ ಒಲುಮೆಯಯ್ಯ
ಕೂಡಲಸಂಗಮದೇವ ನಂತಲ್ಲ ದೊಲ್ಲನಯ್ಯ ॥ 3 ॥

"ಏನು ಬಂದಿರಿ ಹದುಳವಿದ್ದಿರೆ" "ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ?
"ಕುಳ್ಳಿರಿ" ಎಂದರೆ ನೆಲಕುಳಿ ಹೋಹುದೆ?
ಒಡನೆ ನುಡಿದರೆ ಶಿರ ಹೊಟ್ಟೆಯೊಡೆಯುವುದೆ?
ಕೊಡಲಿಲ್ಲದಿದ್ದ ರೊಂದು ಗುಣವಿಲ್ಲದಿರ್ದೊಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವನು? ॥4॥

ಸುರರ ಬೇಡಿದಡಿಲ್ಲ; ನರರ ಬೇಡಿದೊಡಿಲ್ಲ
ಬರಿದೆ ಧೃತಿಗೆಡಬೇಡ ಮನವೇ;
ಆರನಾದಡೆಯು ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೇ
ಕೂಡಲ ಸಂಗಮದೇವನ್ನಲ್ಲದೆ ಆರ ಬೇಡಿದಡಿಲ್ಲ ಮನವೇ. ॥ 5 ॥



Downloaded from https:// www.studiestoday.com

Downloaded from https:// www.studiestoday.com

## ಶಬ್ದಗಳ ಅರ್ಥ


ಘೋರ-ಬಯಂಕರ; ಶಿರ-ತಲೆ; ಸ್ಥಾವರ-ಸ್ಥಿರವಾದುದು; ಜಂಗಮ- ಚಲನೆಯುಳ್ಳದ್ದು; ಹದುಳ- ಕ್ಷೇಮ, ಸೌಖ್ಯ

## ಅಭ್ಯಾಸ

**ಕೃತಿ 1) ಒಂದೇ ವಾಕ್ಯದಲ್ಲಿ ಉತ್ತರಿಸಿರಿ**

1) ದೇವರು ಎಂಥವರನ್ನು ನಂಬುವುದಿಲ್ಲ?
2) ಯಾರಿಗೆ ಅಳಿವಿಲ್ಲ?
3) ಭಕ್ತನ ನಡೆನುಡಿಗಳು ಹೇಗಿರಬೇಕೆಂದು ಬಸವಣ್ಣನವರು ಹೇಳುತ್ತಾರೆ?
4) ಬಸವಣ್ಣನವರ ವಚನಗಳ ಅಂಕಿತನಾಮ ಯಾವುದು?

**ಕೃತಿ 2) ಈ ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 3) ಅನುಕ್ರಮವಾಗಿ ಬರೆಯಿರಿ.**

1) ಆರನಾದಡೆಯು ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೇ.
2) ಒಡನೆ ನುಡಿದರೆ ಶಿರ ಹೊಟ್ಟೆಯೊಡೆಯುವುದೆ?
3) ಮೃದು ವಚನವೇ ಸಕಲ ಜಪಂಗಳಯ್ಯ.
4) ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ.

**ಕೃತಿ 4) ಗುಂಪಿಗೆ ಸೇರದ ಪದ ತೆಗೆಯಿರಿ.**

1) ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಚನ್ನ ಬಸವಣ್ಣ
2) ವಚನ, ಕವಿತೆ, ರಗಳೆ, ಕಾದಂಬರಿ,
3) ಕಾಲು, ಶಿರ, ದೇಹ, ಕಂಬ
4) ಶಿವಾಲಯ, ದೇವಾಲಯ, ಮಂದಿರ, ಮನೆ

**ಕೃತಿ 5) ಒಂದು ಮತ್ತು ಎರಡನೆಯ ವಚನಗಳ ಸಾರಾಂಶವನ್ನು ನಿನ್ನ ಮಾತುಗಳಲ್ಲಿ ಬರೆಯಿರಿ.**

**ಕೃತಿ 6) ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ.**

ಭಕ್ತರಿಗೆ, ವಚನವೇ, ಶಿವನ, ಮನೆಯಲ್ಲಿ

93A4CT

***



Downloaded from https:// www.studiestoday.com

Downloaded from https:// www.studiestoday.com

# 5. ನಿನ್ನ ದಯವಾಗಲಿ ಹರಿಯೆ

– ಶ್ರೀಪಾದರಾಯರು

**ಕವಿ ಪರಿಚಯ:** ಶ್ರೀಪಾದರಾಯರು: ಇವರ ಮೊದಲಿನ ಹೆಸರು ಲಕ್ಷ್ಮೀನಾರಾಯಣ. ಮುಳಬಾಗಿಲು ಇವರು ನೆಲಸಿದ ಸ್ಥಳ. ನರಹರಿತೀರ್ಥರ ನಂತರ ಕೀರ್ತನ ಸಾಹಿತ್ಯವನ್ನು ಮತ್ತೆ ಎತ್ತಿ ನಿಲ್ಲಿಸಿದ ಕೀರ್ತಿ ಶ್ರೀಪಾದರಾಯರದು. ಇವರು ಅನೇಕ ಕೀರ್ತನೆಗಳನ್ನು ಬರೆದಿದ್ದಾರೆ. ಅವುಗಳನ್ನು ಹಾಗೂ ಅವರು ಬರೆದ ಭ್ರಮರಗೀತ, ಗೋಪೀಗೀತಗಳನ್ನು ಹರಿದಾಸರಿಂದ ಪೂಜಾಕಾಲದಲ್ಲಿ ಹಾಡಿಸಿ ಕೀರ್ತನೆಗಳಿಗೆ ವೇದಮಂತ್ರಗಳಷ್ಟು ಸ್ಥಾನ ಕಲ್ಪಿಸಿಕೊಟ್ಟ ಉದಾರ ದೃಷ್ಟಿಯ ಸ್ವಾಮಿಗಳಿವರು ಕೀರ್ತನೆಗಳ ಜೊತೆಗೆ ಸುಳಾದಿ ಹಾಗೂ ಉಗಾಭೋಗಗಳನ್ನು ರಚಿಸಿದರು. 'ರಂಗವಿಠಲ' ಇವರ ಕೀರ್ತನೆಗಳ ಅಂಕಿತ.

ಈ ಕೀರ್ತನೆಯನ್ನು 'ಕಲ್ಲು ಸಕ್ಕರೆ ಕೊಳ್ಳಿರೋ' ಎಂಬ ಕೀರ್ತನ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ.



ನಾ ನಿನಗೇನು ಬೇಡುವುದಿಲ್ಲ ಎನ್ನ
ಹೃದಯ ಕಮಲದೊಳು ನೆಲಸಿರು ಹರಿಯೆ ॥

ಶಿರ ನಿನ್ನ ಚರಣಕ್ಕೆರಗಲಿ ಚಕ್ಷು
ಎರಕದಿಂದಲಿ ನಿನ್ನ ನೋಡಲಿ ಹರಿಯೆ ।
ಕರಣ ಗೀತಂಗಳ ಕೇಳಲಿ ನಾಸಿಕ
ನಿರುಮಾಲ್ಯಾನುದಿನ ಘ್ರಾಣಿಸಲಿ ಹರಿಯೆ ॥

ನಾಲಿಗೆ ನಿನ್ನ ಕೊಂಡಾಡಲಿ ಎನ್ನ
ತೋಳು ಕರಂಗಳ ಮುಗಿಯಲಿ ಹರಿಯೆ ।
ಕಾಲು ತೀರ್ಥಯಾತ್ರೆಗೆ ಪೋಗಲಿ ಮನ
ಖ್ಯಾಲಿನಿಂದಲಿ ನಿನ್ನ ಸ್ಮರಿಸಲಿ ಹರಿಯೆ ॥

ಚಿತ್ತ ನಿನ್ನೊಳು ಮುಳುಗಾಡಲಿ ನಿನ್ನ
ಭಕ್ತಜನರ ಸಂಗ ದೊರಕಲಿ ಹರಿಯೆ ।
ವೃತ್ತಿ ತತ್ತ್ವಯೋಗಾಭ್ಯಾಸಕ್ಕಾಗಲಿ ರಂಗ
ವಿಠಲ ನಿನ್ನ ದಯವಾಗಲಿ ಹರಿಯೆ ॥



Downloaded from https:// www.studiestoday.com

Downloaded from https:// www.studiestoday.com

## ಶಬ್ದಗಳ ಅರ್ಥ


ಚಕ್ಷು = ಕಣ್ಣು; ಎರಕ = ಪ್ರೀತಿ; ಕರಣ = ಕಿವಿ; ನಾಸಿಕ = ಮೂಗು;
ನಿರುಮಾಲ್ಯ (ದ್ಭ) - ನಿರ್ಮಾಲ್ಯ (ತ್ಸ) - ದೇವರಿಗೆ ಅರ್ಪಿಸಿದ ಹೂವು. ಘ್ರಾಣಿಸು = ಮೂಸು; ಧ್ಯಾಲು - ಧ್ಯಾನ, ಏಕಾಗ್ರತೆ; ವೃತ್ತಿ - ಉದ್ಯೋಗ.

## ಅಭ್ಯಾಸ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ದಾಸರು ಹರಿಯು ಎಲ್ಲಿ ನೆಲೆಸಲಿ ಎನ್ನುವರು?
2) ಕಾಲು ಎಲ್ಲಗೆ ಹೋಗಲಿ ಎನ್ನುವರು?
3) ಯಾವುದು ವೃತ್ತಿಯಾಗಬೇಕು?
4) ಶ್ರೀಪಾದರಾಯರ ಅಂಕಿತ ಯಾವುದು?

**ಕೃತಿ 2) ಈ ಪದ್ಯದಲ್ಲಿ ದಾಸರು ಬಳಸಿದ ದೇಹದ ಅಂಗಾಂಗಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ತುಂಬಿ ಪೂರ್ಣ ಗೊಳಿಸಿರಿ.**




**ಕೃತಿ 3) I. ಸಂಧಿ ಬಿಡಿಸಿ ಹೆಸರಿಸಿರಿ.**

ಚರಣಕ್ಕೆರಗು, ಮುಳುಗಾಡು, ಯೋಗಾಭ್ಯಾಸ, ದಯವಾಗು,

**II. ಸಮಾಸ ವಿಗ್ರಹಿಸಿ ಹೆಸರಿಸಿರಿ.**

ಹೃದಯಕಮಲ, ತೀರ್ಥಯಾತ್ರೆ,

**III. ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪ ಬರೆಯಿರಿ.**

ಯಾತ್ರೆ, ಭಕ್ತ, ತೀರ್ಥ

**IV. ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿರಿ.**

ಚರಣಕ್ಕೆ, ಎರಕದಿಂದ, ಮನದಲ್ಲಿ, ರೂಪವನ್ನು

93IZEG

***



Downloaded from https:// www.studiestoday.com

Downloaded from https:// www.studiestoday.com

# ಗದ್ಯ ವಿಭಾಗ



Downloaded from https:// www.studiestoday.com


Downloaded from https:// www.studiestoday.com

# 1. ಸದ್ಗುಣ

ಕಾಡಿನ ಕೊಳದ ಬಳಿ ಒಂದು ಮೊಲ ವಾಸವಾಗಿತ್ತು. ಆ ಕೊಳದ ನೀರು ತಿಳಿಯಾಗಿ ಪರಿಶುದ್ಧವಾಗಿತ್ತು. ಇಂದ್ರನೀಲ ಮಣಿಯಂತೆ ಥಳಥಳಿಸುತ್ತಿತ್ತು. ಕೊಳದಸುತ್ತಲು ಕಾಡಿನಲ್ಲಿ ಹುಲ್ಲು ಪಚ್ಚೆಯಂತೆ ಹಸುರಾಗಿ ಕೋಮಲವಾಗಿ ಬೆಳೆದಿತ್ತು. ಅಲ್ಲಿನ ಗಿಡಗಳಲ್ಲಿ ಹೂಗಳೂ ಹಣ್ಣುಗಳೂ ಗೊಂಚಲು ಗೊಂಚಲಾಗಿ ತುಂಬಿಕೊಂಡಿದ್ದವು. ಆ ಅಡವಿಯು ಗಿಡ, ಮರ, ಬಳ್ಳಿ, ವನಸ್ಪತಿಗಳಿಂದ ತುಂಬಿ ನೋಟಕ್ಕೆ ಅತಿ ಸುಂದರವಾಗಿತ್ತು. ಅಲ್ಲಿ ಗಾಳಿಯೂ ಹಿತಕರವಾಗಿ ಸುಳಿಯುತ್ತಿತ್ತು. ಆ ಕಾಡಿನ ಸೊಗಸಿಗೆ ಮನ ಸೋತು ಜನರು ಅಲ್ಲಿಗೆ ಬರುತ್ತಾ ಇದ್ದರು.

ಮೊಲ ಬಹಳ ಬಲಶಾಲಿಯಾಗಿದ್ದರೂ, ಸೌಮ್ಯವಾಗಿಯೂ ಸುಂದರವಾಗಿಯೂ ಬುದ್ಧಿಶಾಲಿಯಾಗಿಯೂ ಇತ್ತು. ಅದರ ತೇಜಸ್ಸನ್ನೂ ಗಾಂಭೀರ್ಯವನ್ನೂ ಬುದ್ಧಿ ಶಕ್ತಿಯನ್ನೂ ಮೆಚ್ಚಿ, ಕಾಡಿನ ಎಲ್ಲ ಪ್ರಾಣಿಗಳೂ ಸೇರಿ ಅದನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡವು.

ಆ ವನದ ಪ್ರಾಣಿಗಳಲ್ಲಿ ಒಂದು ಮಂಗ, ಒಂದು ನರಿ, ಒಂದು ನೀರು ನಾಯಿ, ಈ ಮೂವರು ಮೊಲದ ಜೀವದ ಗೆಳೆಯರಾಗಿದ್ದರು. ಈ ಗೆಳೆಯರು ಪ್ರತಿದಿನ ಸಂಜೆಯ ಸಮಯದಲ್ಲಿ ಒಂದುಕಡೆ ತಪ್ಪದೆ ಸೇರುತ್ತಿದ್ದರು. ನಿತ್ಯವೂ ಮಾತನಾಡುತ್ತ ಚರ್ಚೆ ಮಾಡುತ್ತಾ ಕ್ರಮೇಣ ತಮ್ಮಲ್ಲಿದ್ದ ದುರ್ಗುಣಗಳನ್ನು ಬಿಟ್ಟು ಸದ್ಗುಣವಂತರಾದರು. ಆ ವನದ ಎಲ್ಲ ಪ್ರಾಣಿಗಳೊಡನೆ ಸ್ನೇಹವನ್ನು ಸಂಪಾದಿಸಿ ಸೌಮ್ಯದಿಂದ ನಡೆದುಕೊಳ್ಳುತ್ತಿದ್ದರು.





Downloaded from https:// www.studiestoday.com

Downloaded from https:// www.studiestoday.com

ಒಂದು ದಿನ ಸಾಯಂಕಾಲ ಈ ಮೂವರು ಆಪ್ತ ಮಿತ್ರರು ಮಾತಿಗೆ ಕುಳಿತಾಗ ಬಹಳ ಹೊತ್ತಾಯಿತು. ನಿರ್ಮಲವಾದ ಬಾನಿನಲ್ಲಿ ಪೂರ್ಣ ಚಂದ್ರ ಹೊಳೆಯುತ್ತಿದ್ದನು. ಮಧ್ಯರಾತ್ರಿಯ ಸಮಯವಾಗಿರಬಹುದು. ಆಗ ವನರಾಜನಾದ ಮೊಲ ಇವರನ್ನು ಕಂಡು 'ಗೆಳೆಯರೆ, ನಾಳೆ ಏನನ್ನೂ ತಿನ್ನಬಾರದು. ಉಪವಾಸಮಾಡಬೇಕು. ಅಲ್ಲದೆ ನಮಗೆ ಸಿಕ್ಕ ಆಹಾರವನ್ನು ಹಸಿದವರಿಗೆ ದಾನಮಾಡಬೇಕು' ಎಂದು ಹೇಳಿತು. ಮೊಲದ ಈ ಮಾತಿಗೆ ಮೆಚ್ಚಿ, ಈ ಮೂವರು ಗೆಳೆಯರು ಸುಮ್ಮನಾದರು.

ಮರುದಿನ ಮಂಗ ಸಮೀಪದ ಒಂದು ಮಾವಿನ ತೋಪಿಗೆ ಹೋಗಿ ಒಳ್ಳೊಳ್ಳೆಯ ಹಣ್ಣುಗಳನ್ನು ಆರಿಸಿ ತಂದಿತು. ಆ ಹಣ್ಣುಗಳನ್ನು ಒಂದೆಡೆ ಇಟ್ಟುಕೊಂಡು ಯಾರಾದರೂ ಹಸಿದವರು ಬಂದರೆ ಕೊಡಬೇಕೆಂದು ಕಾಯುತ್ತಕುಳಿತಿತು. ಯಾರೂ ಬರದಿದ್ದರೆ ತನಗೆ ನಾಳೆ ಒಳ್ಳೆಯ ಆಹಾರವಾಗುತ್ತದೆ ಎಂದು ಯೋಚಿಸಿತು.

ಅದರಂತೆ ನರಿಯೂ ಆಹಾರವನ್ನು ಹುಡುಕುತ್ತ ಹೊರಟಿತು. ಒಂದು ಗುಡಿಸಲಿನ ಹೊರಗೆ ಮೊಸರಿನ ಒಂದು ಚಿಕ್ಕ ಪಾತ್ರೆಯನ್ನು ಕಂಡಿತು. ಅದರ ಒಡೆಯರು ಯಾರಾದರೂ ಇರಬಹುದೆ ಎಂದು ಸ್ವಲ್ಪ ಹೊತ್ತು ಅಲ್ಲಿಯೇ ಕಾದುಕುಳಿತಿತು. ಯಾರೂ ಬರಲಿಲ್ಲ. 'ಇದು ಯಾರ ವಸ್ತು', ಎಂದು ಗಟ್ಟಿಯಾಗಿ ಮೂರು ನಾಲ್ಕು ಸಲ ಕೂಗಿತು. ಯಾರೂ ಬರಲಿಲ್ಲ. ಆಗ ಮೊಸರಿನ ಪಾತ್ರೆಯನ್ನು ಬಾಯಲ್ಲಿ ಕಚ್ಚಿಕೊಂಡು ಹೋಯಿತು. ಅದನ್ನು ಒಂದು ಕಡೆ ಇಟ್ಟು, ಯಾರಾದರೂ ಹಸಿದುಬಂದವರಿಗೆ ಕೊಡಬೇಕೆಂದು ಕಾದು ಕುಳಿತಿತು. ಯಾರೂ ಬರದಿದ್ದರೆ ನಾಳೆ ತನಗೆ ಒಳ್ಳೆಯ ಊಟವಾಗುತ್ತದೆ ಎಂದು ಯೋಚಿಸಿತು.

ಇದೇ ರೀತಿ ನೀರುನಾಯಿ ಆಹಾರವನ್ನು ಹುಡುಕುತ್ತಾ ಹೋಯಿತು. ಒಬ್ಬ ಮೀನುಗಾರ ಮೀನುಗಳನ್ನು ಹಿಡಿದು ರಾಶಿ ಹಾಕುತ್ತಿದ್ದನು. ಅಲ್ಲಿಯೇ ಸ್ವಲ್ಪ ದೂರದಲ್ಲಿ ಮರಳಿನವೇಲೆ ಒಂದು ಮೀನು ಬಿದ್ದಿತ್ತು. ಇದರ ಒಡೆಯರು ಯಾರಾದರೂ ಇರಬಹುದೇನೋ ಎಂದು ಕಾದು ನೋಡಿತು. ಯಾರೂ ಬರಲಿಲ್ಲ 'ಈ ಮೀನು ಯಾರದು', ಎಂದು ಮೂರು ನಾಲ್ಕು ಸಲ ಗಟ್ಟಿಯಾಗಿ ಕೂಗಿತು. ಯಾರೂ ಬರಲಿಲ್ಲ. ಆಗ ಆ ಮೀನನ್ನು ಕಚ್ಚಿ ಕೊಂಡು ಬಂದು ಒಂದುಕಡೆ ಇಟ್ಟಿತು. ಯಾರಾದರೂ ಹಸಿದು ಬಂದು ಕೇಳಿದರೆ ಕೊಡಬೇಕೆಂದು ಕಾದು ಕುಳಿತಿತು. ಯಾರೂ ಬಾರದಿದ್ದರೆ ನಾಳೆ ತನಗೆ ಒಳ್ಳೆಯ ತಿಂಡಿಯಾಗುತ್ತದೆ ಎಂದು ಯೋಚಿಸಿತು.

ಮೊಲದ ಆಹಾರ ಹುಲ್ಲು. ಅದು ಬೇಕಾದಷ್ಟು ಬೆಳೆದಿತ್ತು. ಮನುಷ್ಯರು ಹುಲ್ಲನ್ನು ತಿನ್ನುವುದಿಲ್ಲ. 'ಇದನ್ನು ಯಾರಿಗೆ ಕೊಡಲಿ, ಏನು ಮಾಡಲಿ' ಎಂದು ಮೊಲ ಬಹಳ ಚಿಂತೆಗೆ ಒಳಗಾಯಿತು. ಆಗ ಮನುಷ್ಯರು ಮಾಂಸವನ್ನು ತಿನ್ನುವರೆಂಬ ವಿಷಯ ಹೊಳೆಯಿತು. ಆನಂದದಿಂದ ಕುಣಿದಾಡಿತು. ''ಒಬ್ಬನ ಹಸಿವನ್ನು ಹಿಂಗಿಸಲು ತನ್ನ ಮಾಂಸವನ್ನೇ ಕೊಡುತ್ತೇನೆ. ಖಂಡಿತವಾಗಿಯೂ ಕೊಟ್ಟು ಧನ್ಯನಾಗುತ್ತೇನೆ,'' ಎಂದು ದೃಢ ನಿರ್ಧಾರದಿಂದ ಪ್ರತಿಜ್ಞೆಮಾಡಿತು. ಈ ಪ್ರತಿಜ್ಞೆಯನ್ನು ಕೇಳಿ ಭೂದೇವಿಗೆ ರೋಮಾಂಚನವಾಯಿತು. ಸಮುದ್ರ ಅಲ್ಲೋಲ ಕಲ್ಲೋಲವಾಯಿತು. ಆಕಾಶ ನಿರ್ಮಲ ನೀಲವರ್ಣದಿಂದ ಬೆಕ್ಕಸ ಬೆರಗಾಯಿತು. ಗಾಳಿಯು ಸುಳಿಸುಳಿದು ನರ್ತಿಸುತ್ತ ಪುಷ್ಪಪರಾಗವನ್ನು ತಂದು ಸುರಿದುಸನ್ಮಾನಿಸಿತು.

ಈ ಪ್ರತಿಜ್ಞೆಯನ್ನು ಪರೀಕ್ಷಿಸಬೇಕೆಂದು ದೇವೇಂದ್ರನು ಮನಸ್ಸು ಮಾಡಿದನು. ಬಡ ಹಾದಿಕಾರನ ವೇಷದಿಂದ ಮಧ್ಯಾಹ್ನ ಆವನಕ್ಕೆ ಬಂದನು. ''ನನ್ನ ಗುಂಪಿನ ಗೆಳೆಯರನ್ನು ಅಗಲಿ ದಾರಿತಪ್ಪಿ ಬಂದಿದ್ದೇನೆ. ನನಗೆ ಬಹಳ ಹಸಿವಾಗಿದೆ'' ಎಂಧು ಕೂಗುತ್ತಾ ಮಂಗನ ಬಳಿಗೆ ಬಂದನು. ಮಂಗ ತನ್ನಲ್ಲಿದ್ದ ಹಣ್ಣುಗಳನ್ನು ಕೊಡಲು ಹೋಯಿತು. ಆಗ ವೇಷಧಾರಿಯಾದ ಶಕ್ರನು ''ಸ್ವಲ್ಪ ತಾಳು ಬರುತ್ತೇನೆ'' ಎಂದು ಮುಂದೆ ಹೋದನು. ನರಿಯ ಬಳಿಗೆ ಹೋಗಿ ''ಹಸಿವು ಹೆಚ್ಚಾಗಿದೆ, ಅನ್ನವನ್ನು ಕೊಡಿರಪ್ಪಾ'' ಎಂದು ಕೂಗಿದನು. ನರಿ ತನ್ನಲ್ಲಿದ್ದ ಆಹಾರವನ್ನು ಕೊಡಲು ಹೋಯಿತು. ಹುಸಿವೇಷದ ಇಂಧ್ರನು ''ಬರುತ್ತೇನೆ, ಸ್ವಲ್ಪ ತಾಳು'' ಎಂದು ಹೇಳಿ ನೀರು ನಾಯಿಯ ಹತ್ತಿರ ಬಂದನು'. 'ಹಸಿವನ್ನು ತಾಳಲಾರೆ ಏನಾದರೂ ದಾನ ಮಾಡಿರಯ್ಯಾ'', ಎಂದು ಕೂಗಿದನು. ನೀರುನಾಯಿ ತನ್ನಲ್ಲಿದ್ದ ಮೀನನ್ನು ಕೊಡಲು ಹೋಯಿತು. ಇಂದ್ರನು ಬರುತ್ತೇನೆ ಸ್ವಲ್ಪತಾಳು ಎಂದು ಹೇಳುತ್ತಾ ಮೊಲದ ಸಮೀಪಕ್ಕೆ ಹೋದನು. ''ಅಯ್ಯೋ! ನನಗೆ ತಾಳಲಾರದ ಹಸಿವು. ಇಲ್ಲಿ ನನ್ನ ಹಸಿವನ್ನು ಹಿಂಗಿಸುವವರು ಯಾರೂ ಇಲ್ಲವೆ?'' ಎಂದು ಕೂಗಿದನು. ಮೊಲ ಬಂದು ''ನನ್ನ ಮಾಂಸವನ್ನು ತಿಂದು ತೃಪ್ತಿಪಡು''




Downloaded from https:// www.studiestoday.com

Downloaded from https:// www.studiestoday.com

ಎಂದಿತು. ಆದಕ್ಕೆ ಇಂದ್ರನು ''ಅಯ್ಯಾ ಪ್ರಾಣವನ್ನೇ ಕೊಡಲು ಹಿಂಜರಿಯದೆ ದಯೆ ತೋರಿದ ನಿನ್ನನ್ನು ಹೇಗೆ ಕೊಲ್ಲಲಿ? ಖಂಡಿತ ಸಾಧ್ಯವಿಲ್ಲ' ಎಂದನು. ಮೊಲಕ್ಕೆ ಬಹಳ ವ್ಯಥೆಯಾಯಿತು. ಒಬ್ಬರ ಹಸಿವನ್ನು ಹಿಂಗಿಸುವುದು ತನ್ನಿಂದಾಗಲಿಲ್ಲವಲ್ಲಾ ಎಂಬ ದುಃಖದಿಂದ ಸಂಕಟಪಡುತ್ತಿತ್ತು.

ಸ್ವಲ್ಪ ದೂರದಲ್ಲಿ ಇಂದ್ರನ ಮಾಯೆಯಿಂದ ಬೆಂಕಿ ಹತ್ತಿ ಕೊಂಡಿತು. ಬಂಗಾರದ ಬಣ್ಣದಂತೆ ಉರಿಗಳುಮೇಲೇಳುತ್ತಿದ್ದವು. ಅದನ್ನು ಕಂಡುಮೊಲ ಹರ್ಷದಿಂದ ಬೆಂಕಿಯ ಬಳಿಗೆ ಓಡೋಡಿ ಹೋಯಿತು. ತನ್ನ ಮೈಮೇಲೆ ಸಣ್ಣ ಕ್ರಿಮಿಕೀಟಗಳಿದ್ದರೆ ಬೆಂಕಿಯಿಂದ ಅವು ಸಾಯಬಾರದೆಂದು ಮೈಯನ್ನು ಎರಡು ಮೂರು ಸಲ ಚೆನ್ನಾಗಿ ಕೊಡವಿತು. ರಭಸದಿಂದ ನುಗ್ಗಿ ಬೆಂಕಿಯಲ್ಲಿ ಬಿದ್ದಿತು. ಅದರ ಮೈ ಸುಟ್ಟಿತೆ? ಇಲ್ಲ, ಅಗ್ನಿದೇವನು ಹೂವಿನ ರಾಶಿಯಂತೆ ತಂಪಾಗಿ ಅದರ ಆಯಾಸವನ್ನು ನಿವಾರಿಸಿದನು.



ಇಂದ್ರನು ತನ್ನ ಕೈಗಳಿಂದ ಹೂವನ್ನೆತ್ತುವಂತೆ ಮೃದುವಾಗಿ ಮೊಲವನ್ನೆತ್ತಿಕೊಂಡು ಸ್ವರ್ಗಕ್ಕೆ ಹೋದನು. ದೇವ ಸಭೆಯಲ್ಲಿ ಅದರ ತ್ಯಾಗವನ್ನು ಬಾಯ್ತುಂಬ ಹೊಗಳಿದನು. ಅದರ ವಿಗ್ರಹಗಳನ್ನು ರತ್ನದಲ್ಲಿ ಕೆತ್ತಿಸಿ, ತನ್ನರಮನೆಯ ಮೇಲೆ ಒಂದನ್ನು ಸ್ಥಾಪಿಸಿ, ಅದಕ್ಕೆ 'ವೈಗ್ರವಂತ', ಎಂಬ ಹೆಸರಿಟ್ಟನು. ದೇವ ಸಭಾಭವನದಲ್ಲಿ ಇನ್ನೊಂದನ್ನು ಸ್ಥಾಪಿಸಿ, ಸುಧರ್ಮ ಎಂದು ಹೆಸರಿಟ್ಟನು. ಅಮೃತಕಿರಣನಾದ ಚಂದ್ರನಲ್ಲಿ ಮತ್ತೊಂದು ಮೂರ್ತಿಯನ್ನು ಸ್ಥಾಪಿಸಿದನು. ಹೀಗೆ ಅದರ ಕೀರ್ತಿಯನ್ನು ಶಾಶ್ವತವಾಗಿರುವಂತೆ ಮಾಡಿದನು.



Downloaded from https:// www.studiestoday.com

Downloaded from https:// www.studiestoday.com

## ಶಬ್ದಗಳ ಅರ್ಥ

ಕೋಮಲ-ಮೃದು; ದುರ್ಗಣ-ಕೆಟ್ಟಗುಣ; ನಿರ್ಮಲ-ಪವಿತ್ರ; ಹಿಂಗಿಸು-ತೃಪ್ತಿಪಡಿಸು

## ಅಭ್ಯಾಸ

**ಕೃತಿ 1) I. ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ಗೊಂಚಲು →

- ______
- ______
- ______
- ಹೂವುಗೊಂಚಲು

**II. ವರ್ತುಳದಲ್ಲಿ ಕೊಟ್ಟ ಪ್ರಾಣಿಗಳ ಹೆಸರನ್ನು ವರ್ಗೀಕರಿಸಿ ಬರೆಯಿರಿ.**

ಹುಲಿ, ಬೆಕ್ಕು, ಆನೆ,
ಕುದುರೆ, ಸಿಂಹ, ಕರಡಿ, ಎಮ್ಮೆ,
ಹೋರಿ, ನರಿ, ಚಿರತೆ, ಎತ್ತು,
ತೋಳ, ಆಕಳು, ಕಾಡೆಮ್ಮೆ, ನಾಯಿ
ಹಂದಿ, ಜಿರಾಫೆ, ಕೋಣ, ಚಿಗರೆ,
ಘೇಂಡಾ ಮೃಗ, ಕುರಿ, ಆಡು,
ಪಟ್ಟೆ ಚಿರತೆ, ಕಾಡುಕೋಣ,
ಝಿಬ್ರಾ, ಕತ್ತೆ

| ಸಾಕುಪ್ರಾಣಿಗಳು | ಕಾಡು ಪ್ರಾಣಿಗಳು |
|---|---|
| | |
| | |
| ಕತ್ತೆ | |
| | ಕಾಡು ಕೋಣ |

**ಕೃತಿ 2) ಕೆಳಗೆ ಸೂಚಿಸಿದಂತೆ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ಹುಲ್ಲು ತಿನ್ನುವ ಪ್ರಾಣಿಗಳು

- ಆಕಳು
- ______
- ______
- ______



Downloaded from https:// www.studiestoday.com

Downloaded from https:// www.studiestoday.com

| ಮಾಂಸ ತಿನ್ನುವ ಪ್ರಾಣಿಗಳು | |
|---|---|
| | |
| | |
| | |
| | ಹುಲಿ |

**ಕೃತಿ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1) ಮೊಲ ವಾಸವಾಗಿದ್ದ ಕಾಡು ಹೇಗಿತ್ತು?
2) ಮೊಲವು ಗೆಳೆಯರಿಗೆ ಹಬ್ಬವನ್ನು ಹೇಗೆ ಆಚರಿಸಬೇಕೆಂದು ಹೇಳಿತು?
3) ಕಾಡಿನ ದಾರಿಗುಂಟ ಯಾರು ಹೊರಟಿದ್ದರು ?
4) ನೀರು ನಾಯಿಯು ತಪಸ್ವಿಗೆ ಏನೆಂದು ಹೇಳಿತು?

**ಕೃತಿ 4) ಹೊಂದಿಸಿ ಬರೆಯಿರಿ.**

1) ಮೊಲ .......................................... ಮೊಸರಿನ ಚಿಕ್ಕ ಪಾತ್ರೆ ತಂದಿತು
2) ನರಿ .......................................... ಒಳ್ಳೊಳ್ಳೆಯ ಹಣ್ಣುಗಳನ್ನು ಆರಿಸಿತಂದಿತು
3) ಮಂಗ .......................................... ಒಂದು ಮೀನವನ್ನು ತಂದಿತು
4) ನೀರುನಾಯಿ .......................................... ತನ್ನ ಮಾಂಸವನ್ನೇ ಕೊಡತ್ತೇನೆಂದಿತು

***

93SVG4



Downloaded from https:// www.studiestoday.com

Downloaded from https:// www.studiestoday.com

# 2. ಮಾವಿನ ಮರ ಸಾಕ್ಷಿ ಹೇಳಿದ್ದು


ವಿಜಯನಗರದಲ್ಲೊಬ್ಬ ಬಡವನಿದ್ದ. ಆತ ಅತೀ ಮುಗ್ಧ. ತೀರ್ಥಯಾತ್ರೆ ಮಾಡಿಬರುವ ಆಶೆ ಪಟ್ಟ. ಆಗ ಈಗಿನಂತೆ ಓಡಾಡಲು ವಾಹನದ ಸೌಕರ್ಯ ಇರಲಿಲ್ಲ. ಕಾಲ್ನಡಿಗೆಯಲ್ಲೇ ಹೋಗಬೇಕಾಗಿತ್ತು. ದಾರಿಯಲ್ಲಿ ಕಳ್ಳ-ಕಾಕರ ಭಯ ಬೇರೆ. ಹೀಗಾಗಿ ಹಣವನ್ನು ತೆಗೆದುಕೊಂಡು ಹೋಗುವಂತಿಲ್ಲ.

ದುಡಿದು ಉಳಿಸಿಕೊಂಡಿದ್ದ ಅಲ್ಪ ಸ್ವಲ್ಪ ಹಣವನ್ನು ಊರ ಸಾಹುಕಾರನೊಬ್ಬನಲ್ಲಿ ವಿಶ್ವಾಸದಿಂದ ಇಟ್ಟ.

ಆ ಬಡವ ಊರಾಚೆ ಇರುವ ಮಾವಿನ ಮರದ ಕೆಳಗೆ, ಸಾಹುಕಾರನಿಗೆ ತನ್ನ ಹಣ ಕೊಟ್ಟ. ಈ ಸಾಹುಕಾರನ ಬಳಿ ತನ್ನ ಹಣ ಜೋಪಾನವಾಗಿರುತ್ತದೆ, ಎಂಬ ನಂಬಿಕೆ ಬಡವನದು.

ಯಾತ್ರೆ ಮುಗಿಸಿ, ಕೆಲ ತಿಂಗಳುಗಳ ನಂತರ, ಆ ಬಡವ ಸ್ವಗ್ರಾಮಕ್ಕೆ ವಾಪಸ್ಸು ಬಂದ. ನಂತರ ಪದ್ಧತಿಯಂತೆ ತನ್ನ ಬಂಧು-ಬಳಗಕ್ಕೆಲ್ಲ ಭೋಜನದ ವ್ಯವಸ್ಥೆ ಮಾಡುವುದಿತ್ತು. ಹೇಗಿದ್ದರೂ ಊರ ಸಾಹುಕಾರನ ಬಳಿ ತಾನು ಇಟ್ಟುಹೋಗಿದ್ದ ಹಣವಿದೆಯಲ್ಲ ಎಂಬ ಧೈರ್ಯ. ಸಾಹುಕಾರನ ಮನೆಗೆ ಬಂದ. ಯಾತ್ರೆ ಹೇಗಾಯಿತು? ಎಂದೆಲ್ಲ ಯೋಗಕ್ಷೇಮ ವಿವರಿಸಿದ. ಸಾಹುಕಾರ ದೇಶಾವರಿ ನಗುತ್ತ, ಬಡವನ ಮಾತುಗಳನ್ನು ಆಲಿಸಿದ. ಅದಾದ ನಂತರ ಹೊರಡುವ ಸಮಯದಲ್ಲಿ ಬಡವ.

''ಸಾಹುಕಾರರೆ, ನನ್ನ ದುಡ್ಡು ನನಗೆ ಹಿಂತಿರುಗಿಸುವಿರಾ?'' ಎಂದು ಕೇಳಿಕೊಂಡ. ಈ ತನಕ ಮೆತ್ತನೆ ಮಲ್ಲಿಗೆಯಂತಿದ್ದ ಸಾಹುಕಾರನ ಮನಸ್ಸು, ಹಣದ ವಿಷಯ ಬರುತ್ತಲೇ ಕೆರಳಿದ ಸರ್ಪವಾಯಿತು.



''ಯಾಕೋ, ಯಾತ್ರೆ ಮಾಡಿಬಂದ ಮೇಲೆನಿನಗೆ ಅರಳು - ಮರಳು ಶುರುವಾಗಿದೆ ಏನು? ನಿನ್ನ ಹಣ ನಾನೇಕೆ ತೆಗೆದುಕೊಳ್ಳಲಿ? ನನ್ನದೇ ನನಗೆ ಗುಡ್ಡದಷ್ಟು ಸಂಪತ್ತು ಬಿದ್ದುಕೊಂಡಿರುವಾಗ, ನಿನ್ನ ಜುಜುಬಿ ಹಣದ ಮೇಲೆ ನಾನಾಕೆ ಆಶೆ ಪಡಲಿ?'' ಜೋರು ಬಾಯಿ ಮಾಡಿದ.



Downloaded from https:// www.studiestoday.com

Downloaded from https:// www.studiestoday.com

''ಇದೇನು ಸಾಹುಕಾರರೇ ತಾವಾಡುತ್ತಿರೋದು? ಯಾತ್ರೆಗೆ ಹೊರಡುವದಕ್ಕೆ ಮುಂಚೆ, ನನ್ನಲಿದ್ದ ದುಡ್ಡನ್ನು ನಾನೇ ಕೈಯಾರೆ ತಮಗೆ ಕೊಟ್ಟಿಲ್ಲವೆ? ಊರಿಗೇ ದೊಡ್ಡ ಮನುಷ್ಯರಾದ ನೀವೇ ಹೀಗೆ ಮಾತಾಡಿದರೆ ಹೇಗೆ?'' ಆ ಬಡವ ಹೌಹಾರಿದ.

''ನೋಡು, ನಿನ್ನ ತಲೆ ಸರಿಯಿದ್ದಂತಿಲ್ಲ, ಸುಮ್ಮ ಸುಮ್ಮನೆ ನನ್ನ ಮೇಲೆ ಆರೋಪ ಮಾಡುತ್ತಿರುವೆ. ಊರಲ್ಲಿ ನನ್ನ ಹೆಸರಿಗೆ ಮಸಿ ಬಳೆಯ ಬೇಕೆಂದು ಈ ಆಟ ಆಡುತ್ತಿರುವೆ, ಹೋಗ್ಹೋಗು.''

ಹಣದ ಮುಂದೆ ಸತ್ಯದ ಆಟವೇನೂ ನಡೆಯದು. ಹಣವೆಂದರೆ ಹೆಣವೂ ಬಾಯಿಬಿಡುತ್ತದೆ ಎಂಬ ಮಾತು ಸುಳ್ಳಲ್ಲ. ''ನಿನ್ನ ಬಳಿ ಅಷ್ಟೊಂದು ಹಣ ಹೇಗಿರಲು ಸಾಧ್ಯ? ಅಲ್ಲದೆ ನನ್ನ ಹತ್ತಿರ ನೀನು ಹಣ ಇಟ್ಟಿರುವೆ ಎಂಬುದಕ್ಕೇನಾದರೂ ನಾನು ಪತ್ರ ಬರೆದು ಕೊಟ್ಟಿರುವೆನೇನು? ಅಥವಾ ಯಾರಾದರೂ ಸಾಕ್ಷಿ-ಗೀಕ್ಷಿ ಇದ್ದಾರೇನು? ಹಾರಾಡಿದ ಸಾಹುಕಾರ.

ಇಲ್ಲವಲ್ಲ, ಬಡವ ಹಣ ಕೊಟ್ಟಿರುವುದಕ್ಕೂ... ಸಾಹುಕಾರ ಸ್ವೀಕರಿಸಿರುವುದಕ್ಕೂ ಅವರಿಬ್ಬರ ಮನಸ್ಸೇ ಸಾಕ್ಷಿಯಾಗಿದೆ. ವ್ಯವಹಾರಿಕವಾದ ದಾಖಲೆಗಳಿಲ್ಲ, ಸಾಕ್ಷಿಗಳೂ ಇಲ್ಲ. ಅಳುಮೋರೆ ಹಾಕಿಕೊಂಡು ಬಡವ ಹಿಂತಿರುಗಬೇಕಾಯಿತು.

ವಿಷಯ ಗೊತ್ತಾಗಿ, ನೆರೆಹೊರೆಯವರು ಬಡವನಿಗೆ ಸಾಂತ್ವನ ಹೇಳಿದರು. ಒಬ್ಬ ಮುದುಕ ಹೇಳಿದ, ''ಇಂಥ ಅಧರ್ಮಿ ಸಾಹುಕಾರರಿಗೆ ಆ ತೆನ್ನಾಲಿಯೇ ಸರಿ. ನೀನು ಆತನ ಮುಂದೆ ಎಲ್ಲವನ್ನು ಹೇಳು... ನಿನ್ನ ಸಮಸ್ಯೆ ಸರಳ ಮಾಡುತ್ತಾನೆ.''

ಮುದುಕನ ಮಾತಿಗೆ ಅಲ್ಲಿದ್ದವರೂ ಧ್ವನಿಗೂಡಿಸಿದರು. ಬಡವ ತನ್ನ ಗೋಳಿನ ಕತೆಯನ್ನು ತೆನ್ನಾಲಿ ರಾಮಕೃಷ್ಣನಿಗೆ ಹೇಳುವಂತೆ ಅವರೆಲ್ಲ ಒತ್ತಾಯಿಸಿದರು. ತನ್ನ ದೈವ ಇದ್ದಂತೆ ಆಗಲಿ ಅಂದುಕೊಂಡ ಬಡವ, ತೆನ್ನಾಲಿಯ ಮನೆಗೆ ಬಂದ. ತಾನು ಹೇಗೆ ಮೋಸಹೋದೆ ಎಂಬುದನ್ನು ರಾಮಕೃಷ್ಣನಿಗೆ ವಿವರಿಸಿದ. ತಪ್ಪು ಯಾರದೆಂಬುದು ತೆನ್ನಾಲಿಯ ಸೂಕ್ಷ್ಮ ಮತಿಗೆ ಆಗಲೇ ತಿಳಿಯಿತು.

''ನಾಳೆ ಬೆಳಿಗ್ಗೆ ನೀನು ಮಹಾರಾಜರ ಆಸ್ಥಾನಕ್ಕೆ ಬಾ. ಆ ಸಾಹುಕಾರನನ್ನೂ ಕರೆಸುತ್ತೇವೆ. ಅಲ್ಲಿಯೇ ನಿನ್ನ ಸಮಸ್ಯೆ ಬಗೆಹರಿಸೋಣ'' ರಾಮಕೃಷ್ಣ ಧೈರ್ಯ ಹೇಳಿದ.

ಇದು ಸಾಹುಕಾರನಿಗೂ ಗೊತ್ತಾಯಿತು. ಒಂದು ಪತ್ರವಿಲ್ಲ, ಯಾರೊಬ್ಬರೂ ಸಾಕ್ಷಿಯಿಲ್ಲ.. ಹಣ ಕೊಟ್ಟದ್ದಕ್ಕೂ, ಪಡೆದದ್ದಕ್ಕೂ ಪುರಾವೆಯೇ ಇಲ್ಲ... ಅಂದಮೇಲೆ ಈ ವಿಚಾರಣೆಯಲ್ಲಿ ನಾನೇ ಗೆಲ್ಲೋದು-ಸಾಹುಕಾರನ ನಂಬಿಕೆ.

ಮರುದಿನ ಇಬ್ಬರೂ ಆಸ್ಥಾನಕ್ಕೆ ಬಂದರು. ವಾದ-ಪ್ರತಿವಾದ ಆಲಿಸಿದ ಮಹಾರಾಜರಿಗೆ- ಈ ವ್ಯಾಜ್ಯ ಜಟಿಲವೆನಿಸಿತು. ಹೇಗೆ ನ್ಯಾಯ ಹೇಳುವದು ತೋಚಲಿಲ್ಲ. ಕೊನೆಗೆ ಅವರೆ- ''ತೆನ್ನಾಲಿ, ಈ ಪ್ರಕರಣ ನೀನೇ ಬಗೆಹರಿಸು, ನೋಡೋಣ'' ಎಂದು ರಾಜರು ಆ ಹೊಣೆಯನ್ನು ರಾಮಕೃಷ್ಣನಿಗೆ ಒಪ್ಪಿಸಿದರು. ಹೆಗಲ ಮೇಲಿನ ಶಲ್ಯ ಸರಿಪಡಿಸುತ್ತ, ರಾಮಕೃಷ್ಣ ಎದ್ದು ನಿಂತ.

''ಏನಯ್ಯಾ, ಈ ಸಾಹುಕಾರರಿಗೆ ನೀನು ಹಣ ಕೊಡುವದೆಂದರೇನು? ಯಾಕೆ ಸುಮ್ಮನೆ ಈ ಮಹಾನುಭಾವರ ಮಾನ ತೆಗೆಯುತ್ತೀ?'' ರಾಮಕೃಷ್ಣನ ಮಾತು ಕೇಳಿದ ಬಡವ ತತ್ತರಿಸಿ ಹೋದ. ನ್ಯಾಯಪರನೂ ಸತ್ಯವಂತರ ಪಕ್ಷಪಾತಿಯೂ ಎಂದು ಕರೆಯಿಸಿಕೊಳ್ಳುವ ಈ ರಾಮಕೃಷ್ಣನೇ ಹೀಗೆ ಮಾತಾಡತೊಡಗಿದರೆ...! 'ಸತ್ಯವಂತರಿಗಿದು ಕಾಲವಲ್ಲ' ಬಡವ ಹತಾಶನಾದನು.

'ಈ ತೆನ್ನಾಲಿ ತನ್ನ ಪರವಾಗಿದ್ದಾನೆ...' ಸಾಹುಕಾರ ಒಳಗೊಳಗೇ ಖುಷಿಪಟ್ಟ.

ತೆನ್ನಾಲಿ ಮತ್ತೇ ಕೇಳಿದ - ''ಹೇಳು, ಇವರಿಗೆ ನೀನು ಹಣ ಕೊಟ್ಟಿರುವುದು ನಿಜವೇ ಆಗಿದ್ದರೆ.. ಯಾವಾಗ ಕೊಟ್ಟೆ? ಎಲ್ಲಿ ಕೊಟ್ಟೆ?



Downloaded from https:// www.studiestoday.com

Downloaded from https:// www.studiestoday.com

ಬಡವ ಹೇಳಿದ – ''ಸ್ವಾಮಿ, ಊರಾಚೆ ಇರುವ ದೊಡ್ಡ ಮಾವಿನ ಮರದ ಕೆಳಗೆ ನಾನು ಹಣ ಕೊಟ್ಟಿರುವುದು ನಿಜ. ಇದಕ್ಕೆ ಈ ಮಾವಿನ ಮರವೇ ಸಾಕ್ಷಿ.''

''ಹಾಗಿದ್ದರೆ, ಆ ಮಾವಿನ ಮರದ ಹತ್ತಿರ ಹೋಗಿ, ಇನ್ನೊಮ್ಮೆ ಪ್ರಮಾಣ ಮಾಡಿ ಬಾ.. ಹುಂ... ಓಡು, ಸಮಯ ವ್ಯರ್ಥ ಮಾಡಬೇಡ'' ತೆನ್ನಾಲಿ ಆಜ್ಞೆ ಮಾಡಿದ.

ಏಚು-ಪೇಚು ಒಂದು ಗೊತ್ತಿಲ್ಲದ ಬಡವ, 'ಹಾಗೆ ಆಗಲಿ ಸ್ವಾಮಿ' ಅಂದವನೇ ಓಟ ಕಿತ್ತ, ಸಾಹುಕಾರ ಅಲ್ಲಿಯೆ ನಿಂತ.

'ಮರ ಇರೋದ ಅಲ್ಲಿ, ವಿಚಾರಣೆ ಇಲ್ಲಿ, ಅದೇನು ಮರ ಮಾತಾಡುತ್ತದೆಯೊ?' ಎಂದು ಆಸ್ಥಾನದಲ್ಲಿದ್ದವರು ಗೊಣಗಿಕೊಂಡರು. ಕುಶಾಗ್ರಮತಿ ರಾಮಕೃಷ್ಣ ಏನೇ ಮಾಡಿದರೂ, ಸರಿಯಾಗಿಯೇ ಮಾಡುತ್ತಾನೆ- ಎಂಬುದು ಮಹಾರಾಜರಿಗೆ ಮನದಟ್ಟಾಗಿತ್ತು.

ಮಾವಿನ ಮರದ ಹತ್ತಿರ ಪ್ರಮಾಣ ಮಾಡಲು ಹೋಗಿದ್ದವ ಎಷ್ಟೊತ್ತಾದರೂ ಬರಲಿಲ್ಲ. 'ಯಾಕೆ ತಡವಾಗುತ್ತಿದೆ?' ರಾಮಕೃಷ್ಣ ಸಾಹುಕಾರನಿಗೆ ಕೇಳಿಸುವಂತೆ, ತನಗೆ ತಾನೆ ಪ್ರಶ್ನೆ ಹಾಕಿಕೊಂಡು.

''ಏ... ಬೇಗ ಬರಲು ಅದೇನು ಇಲ್ಲೆ ಇರೋದಾ? ಇಲ್ಲಿಂದ ನಾಲ್ಕು ಹರದಾರಿ ದೂರ ಇದೆ'' ಸಾಹುಕಾರ ನಕ್ಕ.

''ಅಂದ್ರೆ ಆ ಸ್ಥಳ ನಿನಗೆ ಗೊತ್ತೆ?'' ರಾಮಕೃಷ್ಣ ಕೇಳುತ್ತಿದ್ದಂತೆಯೆ... ''ಚೆನ್ನಾಯಿತು. ಗೊತ್ತಾ ಅಂತ ಕೇಳ್ತಿದ್ದೀರಲ್ಲಾ.. ಅಲ್ಲಿಯೇ ತಾನೆ ಅವನಿಂದ ಹಣ ಪಡೆದದ್ದು'' ಸಾಹುಕಾರ ತನಗರಿವು ಇಲ್ಲದೆ ನಿಜ ಅರುಹಿದ್ದ.

ಅಪರಾಧಿ ಯಾರೆಂಬುದು ಸಭೆಗೆ ಗೊತ್ತಾಗಿ ಹೋಯಿತು. ಚಾಣಾಕ್ಷ ತೆನ್ನಾಲಿ, ಆರೋಪಿಯ ಬಾಯಿಂದಲೇ ಸತ್ಯ ಹೊರಬರುವಂತೆ ಮಾಡಿಬಿಟ್ಟ.

ದಂಡ ಸಹಿತ ಬಡವನ ಹಣ ಅವನಿಗೆ ಹಿಂತಿರುಗಿಸುವಂತೆಯೂ ಹಾಗೂ ಮಾಡಿದ ಅಪರಾಧಕ್ಕೆ ಒಂದು ವರ್ಷ ಜೈಲು ಶಿಕ್ಷೆ ಅನುಭವಿಸುವಂತೆಯೂ ತೆನ್ನಾಲಿ ತೀರ್ಪು ನೀಡಿದ.

## ಶಬ್ದಗಳ ಅರ್ಥ

ಸೌಕರ್ಯ – ವ್ಯವಸ್ಥೆ; ವಾಪಸ್ಸು – ಮರಳಿ; ಹೌಹಾರು – ಗಾಬರಿಯಾಗು; ಕುಶಾಗ್ರಮತಿ – ಬುದ್ಧಿವಂತ



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ

**ಕೃತಿ 1) I. ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

| | | |
|---|---|---|
| (ರಸ್ತೆ ಸಾರಿಗೆ) | ರಸ್ತೆಯ ಮೇಲೆ ಓಡಾಡುವ | |
| (ವಾಯು ಸಾರಿಗೆ) | ಆಕಾಶದಲ್ಲಿ ಹಾರಾಡುವ | |
| (ಜಲ ಸಾರಿಗೆ) | ಜಲದಲ್ಲಿ ತೇಲುತ್ತ ಸಾಗುವ | |

**II. ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ಸಮಾಜದಲ್ಲಿನ್ಯಾಯ ಬಗೆಹರಿಸುವ ವ್ಯಕ್ತಿಗಳು (ನೀಡುವ)

- 
- 
- ಸರಪಂಚರು

**III.** ಹಣ ಹೂಡಿಕೆಯ ಕೇಂದ್ರಗಳು

- ಬ್ಯಾಂಕು
- 
- 
- 

**ಕೃತಿ 2) I. ಕೆಳಗೆ ಕೊಟ್ಟ ಶಬ್ದದಿಂದ ಸರಿಯಾದ ಅರ್ಥ ಬರುವ ಶಬ್ದಗಳನ್ನು ರಚಿಸಿ ಬರೆಯಿರಿ.**

**II. ಕೆಳಗಿನ ಮಾತು ಯಾರು ಅಂದರು ಹೇಳಿರಿ.**

1) ''ಸಾಹುಕಾರರೆ, ನನ್ನ ದುಡ್ಡು ನನಗೆ ಹಿಂತಿರುಗಿಸುವಿರಾ?''

2) ''ಯಾಕೋ, ಯಾತ್ರೆ ಮಾಡಿಬಂದ ಮೇಲೆ ನಿನಗೆ ಅರಳು-ಮರಳು ಶುರುವಾಗಿದೆ ಏನು?

3) ''ಇಂಥ ಅಧರ್ಮಿ ಸಾಹುಕಾರರಿಗೆ ಆ ತೆನ್ನಾಲಿಯೇ ಸರಿ''

4) ''ತೆನ್ನಾಲಿ, ಈ ಪ್ರಕರಣ ನೀನೇ ಬಗೆಹರಿಸು, ನೋಡೋಣ''



Downloaded from https:// www.studiestoday.com

Downloaded from https:// www.studiestoday.com

**III. ಕೆಳಗೆ ಕೊಟ್ಟ ಪದಗಳಿಗೆ ವಿರುದ್ಧ ಪದ ಬರೆಯಿರಿ.**

1) ವಿಶ್ವಾಸ x

2) ಬಡವ x

3) ಧೈರ್ಯ x

4) ದೊಡ್ಡ x

5) ಸಾಧ್ಯ x

6) ಮುದುಕ x

**III. ಒಂದೆರಡು ವಾಕ್ಯಗಳಲ್ಲಿ ಉತ್ತರ ಬರುವಂತೆ ಐದು ಪ್ರಶ್ನೆಗಳನ್ನು ತೆಗೆದು ಉತ್ತರ ಬರೆಯಿರಿ.**

ಕೃತಿ

**1) ಪ್ರಶ್ನೆ** ...............................................................

**ಉತ್ತರ:** ...............................................................

...............................................................

...............................................................

**2) ಪ್ರಶ್ನೆ** ...............................................................

**ಉತ್ತರ:** ...............................................................

...............................................................

...............................................................

**3) ಪ್ರಶ್ನೆ** ...............................................................

**ಉತ್ತರ:** ...............................................................

...............................................................

...............................................................

**4) ಪ್ರಶ್ನೆ** ...............................................................

**ಉತ್ತರ:** ...............................................................

...............................................................

...............................................................

**5) ಪ್ರಶ್ನೆ** ...............................................................

**ಉತ್ತರ:** ...............................................................

...............................................................

...............................................................

***

942RHR



Downloaded from https:// www.studiestoday.com

Downloaded from https:// www.studiestoday.com

# 3. ಔತಣಕ್ಕೆ ಕರೆ

ನಮ್ಮನ್ನು ಅಪರೂಪವಾಗಿ, ಆದರೂ ಆದರಪೂರ್ವಕವಾಗಿ ಮೂರ್ತಿ ಔತಣಕ್ಕೆ ಆಮಂತ್ರಿಸಿದ್ದ. ಎಷ್ಟೋ ದಿನಗಳಿಂದ ಮನೆಯ ಗೊಡ್ಡು ಸಾರನ್ನವನ್ನೆ ತಿಂದು ನನಗೂ ಸಾಕಾಗಿತ್ತು. ಅವನ ಒತ್ತಾಯದ ಕರೆಯನ್ನು ನಿರಾಕರಿಸದೆ ನಾನು ಸಪತ್ನೀಕನಾಗಿ ಹೋಗಲು ಸಂತೋಷದಿಂದ ಸಮ್ಮತಿಸಿದೆ.

ಅಂದು ಭಾನುವಾರವಾದರೂ ಬೇಗನೆ ಎದ್ದೆವು. ಊಟಕ್ಕೆ ಹೋಗುವಾಗ ಮನೆಯಲ್ಲಿ ಯಾಕೆ ಹೆಚ್ಚಾಗಿ ಉಪಹಾರ ಮಾಡಿಕೊಂಡು ಹೋಗುವುದು? ಇಲ್ಲೇ ಪುಷ್ಕಳವಾಗಿ ತಿಂಡಿತೀರ್ಥ ಮುಗಿಸಿಕೊಂಡು ಹೋದರೆ ಮೂರ್ತಿಯ ಮನೆಯ ಔತಣಕ್ಕೆ ಅನ್ಯಾಯಮಾಡಿದಂತಾಗುತ್ತದೆ ಎಂದು ಬಗೆದು ಲಘು ಉಪಹಾರದಿಂದಲೇ ತೃಪ್ತರಾಗಿ ಹೊರಟೆವು.

ಮೂರ್ತಿಯ ಮನೆ ಇರುವುದು ಮಲ್ಲೇಶ್ವರದ ಹದಿನೆಂಟನೇ ಕ್ರಾಸಿನಲ್ಲಿ ನಾವು ಇರುವುದು ಬಸವನಗುಡಿಯ ಕೊನೆಯಲ್ಲಿ, ಹನ್ನೆರಡು ಗಂಟೆಯೊಳಗಾದರೂ ಮನೆ ತಲುಪಬೇಕಲ್ಲಾ ಎಂದು ಒಂಭತ್ತು ಘಂಟೆಯ ಹೊತ್ತಿಗೆ ನಮ್ಮ ಉಪಹಾರವನ್ನು ಮುಗಿಸಿದೆವು. ಮಾಲಿನ 6 ಘಂಟೆಯಿಂದಲೇ ಹೊರಡುವ ಸನ್ನಾಹದಲ್ಲುದ್ಯುಕ್ತಳಾಗಿದ್ದಳು.

ಸೀತ ಹೊರಡುವ ಕಾಲದಲ್ಲಿ ಹಟಮಾಡಿದಳೆಂದು ಧೊಪ್, ಧೊಪ್ ಎಂದು ಬೆನ್ನಿನ ಮೇಲೆ ಎರಡು ಗುದ್ದಿದಳು. ರಾಗ ತಾರಕಕ್ಕೇರಿತು ನಿಲಾನ್ ಲಂಗ ಸಾಕೆಂದು ಮಾಲಿನ ಹೇಳಿದರೆ ಜರೀಲಂಗ ಬೇಕೆಂದು ಸೀತ ಸಂಗೀತ ಪ್ರಾರಂಭಿಸಿದಳು. ಅದಕ್ಕೊಪ್ಪಿ ಎರಡು ಜಡೆ ಹಾಕಿಸಕೊ ಎಂದರೆ, ''ಪೋನಿ ಟೈಲ್'' ಬೇಕು ಎಂದು ಪುನಃ ರಾಗ ತೆಗೆದಳು. ಅದ ವಿವಗಿದ ಮೇಲೆ ಉಪ್ಪಿಟ್ಟು ಇನ್ನೂ ಬೇಕೆನ್ನುತ್ತಾ ''ಹೋ'' ಎಂದು ಕಿರಿಚಿದಳು. ''ಊಟಕ್ಕೆ ಹೋಗುವಾಗ ಹೊಟ್ಟೆ ಬಿರಿಯುವಂತೆ ಇಲ್ಲೇ ತಿಂದುಕೊಂಡು ಹೋಗುವುದೇ ? ಸಾಕು ಎದ್ದೇಳು'' ಎಂದು ಮಾಲಿನಿ ಸಮಾಧಾನಪಡಿಸಿದಳು. ಅಂತೂ 10 ಘಂಟೆಗೆ ಮನೆಬಿಟ್ಟು ಬಸ್ ಸ್ಟ್ಯಾಂಡಿಗೆ ಹೋದೆವು.

ಭಾನುವಾರವೆಂದ ಮೇಲೆ ಬಸ್ಸಿಗಾಗಿ ನೂಕುನುಗ್ಗಲು ಹೇಳ ಬೇಕಾಗಿಲ್ಲ, ಒಂದನೇ ನಂಬರ್ ಬಸ್ಸನ್ನು ಹಿಡಿದು ಗಾಂಧಿಬಜಾರ್‌ವರೆಗೆ ಹೋಗಿ, ಅಲ್ಲಿಂದ ಹನ್ನೊಂದನೇ ನಂಬರ್ ಬಸ್ಸಿನಲ್ಲಿ ಹೋಗಬೇಕಾಗಿತ್ತು. ಒಂದನೇ ನಂಬರ್ ಬಸ್ಸನ್ನು ಏರಲು ಮುಕ್ಕಾಲು ಘಂಟೆ ತಪಸ್ಸುಮಾಡ ಬೇಕಾಯಿತು. ಹನ್ನೊಂದು ಘಂಟೆಗೆ ಗಾಂಧಿಬಜಾರ್ ತಲುಪಿ ಹನ್ನೊಂದನೇ ನಂಬರ್ ಬಸ್ಸಿನ ಕ್ಯೂನಲ್ಲಿ ನಿಂತೆವು. ಆಗ ಬಂದಬಸ್ಸು ಪೂರ್ವಾರ್ಧ ಕ್ಯೂವನ್ನು ಹೊತ್ತು ಹೊರಟಿತು. ಇನ್ನೊಂದು ಬಸ್ಸಿನಲ್ಲಿ ನಾವು ಕುಳಿತೆವು. ಕಂಡಕ್ಟರ್ ಎಲ್ಲರಿಗೂ ಟಿಕೆಟ್ ಕೊಟ್ಟ, ನಾವು ಟಿಕೆಟ್ ತೆಗೆದುಕೊಂಡು ಭದ್ರವಾಗಿ ಕುಳಿತೆವು. ''ವಿದ್ಯುಚ್ಛಕ್ತಿ ನಿಂತರೆ ಟಿಕೆಟು ಹಣ ವಾಪಾಸು ಕೊಡಲಾಗುವುದಿಲ್ಲ, ಆದರೆ ಅದೇ ಟಿಕೆಟನ್ನು ಮುಂದಿನ ಪ್ರದರ್ಶನಕ್ಕೆ ಉಪಯೋಗಿಸಬಹುದು'' ಎಂದು ಚಲಚ್ಚಿತ್ರ ಮಂದಿರಗಳಲ್ಲಿ ಚಿತ್ರ ಪ್ರಾರಂಭವಾಗುವ ಮೊದಲೇ ಪರದೆಯಲ್ಲಿ ನೋಟೀಸು ತೋರಿಸುತ್ತಾರೆ. ಇದ್ದಕ್ಕಿದ್ದ ಹಾಗೆ ನೀರು ನಿಲ್ಲುವುದು, ಲೈಟು ಆರಿಹೋಗುವುದು ನಮ್ಮಲ್ಲಿ ಸರ್ವರೂ ಅನುಭವಿಸಬೇಕಾದ ಸಾಮಾನ್ಯ ಘಟನೆಗಳು. ಇದನ್ನರಿತು ನುರಿತ ಚಲಚ್ಚಿತ್ರ ಮಂದಿರಗಳ ಮಾಲೀಕರು ತಪ್ಪದೆ ಮುಂಜಾಗ್ರತೆ ಕೊಡುತ್ತಾರೆ.

ಇದ್ದಕ್ಕಿದ್ದ ಹಾಗೆ ಬಸ್ಸು ಮುಂದೆ ಹೊರಡದೆ ಸತ್ಯಾಗ್ರಹ ಹೂಡುವುದೂ ಸಾಮಾನ್ಯವೆ! ಇದಕ್ಕೆ ಪ್ರತ್ಯೇಕ ನೋಟೀಸು ಇಲ್ಲದಿದ್ದರೂ, ಟಿಕೇಟು ಪಡೆದ ಮೇಲೆ ಪ್ರಯಾಣ ಹೇಗಾದರೂ ಎಷ್ಟು ಹೊತ್ತಿಗಾದರೂ ಬಸ್ಸಿನಲ್ಲೇ ಮಾಡಬೇಕೆಂದು ಎಲ್ಲರಿಗೂ ತಿಳಿದ ವಿಷಯ. ಆದರೆ ಮುಂದಿನ ಬಸ್ಸಿನಲ್ಲೇ ಹೇಗಬೇಕೆಂಬ ನಿರ್ಬಂಧವೂ ಇಲ್ಲ, ಸಾಧ್ಯತೆಯೂ ಇಲ್ಲ, ಸ್ಥಳವಿದ್ದರೆ ಹೋಗಬಹುದು. ಇಲ್ಲವಾದರೆ ಪ್ರಯಾಣಿಕರನ್ನು ಹೊತ್ತು ಸತ್ಯಾಗ್ರಹ ಹೂಡಿದ ಅಚಲ ವಾಹನಕ್ಕೆ ನೇರವಾಗಿ ಹಳೆಯ ನಿರ್ಭಾಗ್ಯ ''ರಿಲೀಫ್'' ಬಸ್ಸೊಂದು ಬರುವವರೆಗೆ ಕಾಯಬೇಕು.

ನಮ್ಮನ್ನು ಹೊರಲು ಸಿದ್ಧವಾಗಿ ಬರಬೇಕಾಗಿದ್ದಂಥಾ ''ರಿಲೀಫ್'' ಬಸ್ಸಿಗಾಗಿ ಕಾಯಲೇಬೇಕಾಯಿತು. ಆ ಬಸ್ಸು ಬಂತು. ನಾವು ಅದರಲ್ಲಿ ನುಗ್ಗಿ ಕುಳಿತೆವು. ಕಂಡಕ್ಟರ್ ''ರೈಟ್'' ಎಂದ. ಬಸ್ಸು ''ಘುರ್'' ಎಂದು ಹೊರಡುವ ಚಿನ್ಹೆ ತೋರಿಸಿತು, ಆದರೆ



Downloaded from https:// www.studiestoday.com

Downloaded from https:// www.studiestoday.com

ಮರುಕ್ಷಣದಲ್ಲೇ ಪುಸಕ್ಕೆಂದು ತಟಸ್ಥವಾಯಿತು. ಆಗ ನನ್ನ ಎದೆ ಧಸಕ್ಕೆಂದಿತು. ಈ ಬಸ್ಸೂ ಕೈಕೊಟ್ಟರೆ ಮಲ್ಲೇಶ್ವರ ಮುಟ್ಟುವುದೆಷ್ಟು ಹೊತ್ತಿಗೆ? ಪಾಪ ಮೂರ್ತಿ ನಮಗಾಗಿ ಕಾದು, ಕಾದು ಬೇಸರಪಟ್ಟು ಕೊಂಡಿರಬಹುದು ಎಂದು ಯೋಚಿಸಿದೆ. ಅಷ್ಟು ಹೊತ್ತಿಗೆ ಡ್ರೈವರ್ ಸಾಹೇಬ್ ಕಂಡಕ್ಟರ್ ಮಹಾಶಯನಿಗೆ ''ಸ್ವಲ್ಪ ತಳ್ಳಯ್ಯ'' ಎಂದ. ಕಂಡಕ್ಟರ್ ಮತ್ತೆ ಇನ್ನೆರಡು ಜನ ಪಕ್ಕದ ಬಸ್ಸಿನ ಕಂಡಕ್ಟರುಗಳು ಕೂಡಿ ಬಸ್ಸನ್ನು ತಳ್ಳಿದರು. ಬಸ್ಸು ಶಬ್ದ ಮಾಡಿತು. ನನಗೆ ಸಮಾಧಾನವಾಯಿತು. ಬಸ್ಸು ಹೊರಟಿತು.

ಬಸ್ಸು ಮಲ್ಲೇಶ್ವರವನ್ನು ತಲುಪುತ್ತದೋ ಇಲ್ಲವೋ ಎಂದು ಅನುಮಾನಿಸುತ್ತಿದ್ದೆ. ಹೇಗೂ 18ನೇ ಕ್ರಾಸ್ ತಲುಪಿದಾಗ ನಾನು ಸಮಾಧಾನದ ನಿಟ್ಟುಸಿರು ಬಿಟ್ಟೆ. ಬಸ್ಸಿನಿಂದ ಇಳಿದು ಮೂರ್ತಿಯ ಮನೆಗೆ ಅರ್ಧ ಮೈಲಿ ನಡೆದುಕೊಂಡು ಹೋಗಬೇಕು. ದಾರಿಯುದ್ದಕ್ಕೂ ಮಾಲಿನ ಶೀತಾಳಿಗೆ ''ಅಲ್ಲಿ ಗಂಭೀರವಾಗಿರಬೇಕು. ಅದು ಬೇಕು ಇದು ಬೇಕು ಎಂದು ಹಟ ಮಾಡಬಾರದು. ಹಾಕಿದ್ದನ್ನು ಚೆಲ್ಲದೆ ತಿನ್ನಬೇಕು.... ಇತ್ಯಾದಿ'' ಎಂದು ಹಿತೋಪದೇಶ ಮಾಡುತ್ತಾ ನಡೆದಳು.

ಮೂರ್ತಿಯ ಮನೆಯನ್ನು ತಲುಪಿದಾಗ ದಂಪತಿಗಳು ಸಾಲಾಂಕೃತರಾಗಿ ಮನೆಯಿಂದ ಹೊರಗೆ ಬರುತ್ತಿದ್ದರು. ಆಹಾ! ಏನು ಆದರ! ಏನು ಸೌಜನ್ಯ! ನಮ್ಮನ್ನು ಸ್ವಾಗತಿಸಲು ಬರುತ್ತಿದ್ದಾರೆಂದು ಸಂತೋಷಪಟ್ಟೆ ನಾನು.

''ಓಹೊಹೋ! ಏನು ರಾಯರೆ? ಈ ಬಿಸಿಲಿನಲ್ಲಿ ದಯಮಾಡಿಸಿದಿರಿ? ಬನ್ನಿ ಬನ್ನಿ'' ಎಂದ ಮೂರ್ತಿ, ಬಾಯಿ ಅಗಲ ಮಾಡುತ್ತಾ.

ನನ್ನ ಉತ್ಸಾಹಕ್ಕೆ, ಸಂತೋಷಕ್ಕೆ, ತಣ್ಣೀರೆರಚಿದಂತಾಯಿತು.

''ಏನೂ ಇಲ್ಲ, ಹೀಗೇ ಬಂದವು'' ಎಂದು ಹಲ್ಲು ಗಿಂಜಿದೆ.

''ಶಿವರಾಮಯ್ಯನ ಮನೆಯಲ್ಲಿ ಊಟಕ್ಕೆ ಕರೆದಿದ್ದಾರೆ. ಪರವಾಗಿಲ್ಲ ಒಂದು ಹತ್ತು ನಿಮಿಷ ಕುಳಿತುಕೊಳ್ಳೋಣ'' ಎಂದು ಪಡಸಾಲೆಗೆ ನಮ್ಮನ್ನು ಕರೆದುಕೊಂಡು ಹೋದ.

ನಾನು ಮುಳ್ಳಿನ ಮೇಲೆ ಕುಳಿತುಕೊಳ್ಳುವಂತೆ ಅವನು ತೋರಿಸಿದ ಕುರ್ಚಿಯಲ್ಲಿ ಕುಳಿತುಕೊಂಡೆ.

ಸೀತಾ ಅಷ್ಟರಲ್ಲಿ ರಾಗ ತೆಗೆದಳು.

''ಅಮ್ಮಾ ಹೊಟ್ಟೆ...'' ಮಾಲಿನಿಯ ಕೆರಳಿದ ಕಣ್ಣನ್ನು ನೋಡಿ ಅವಳ ಕೈ ತನ್ನ ಬೆನ್ನ ಮೇಲೆ ಬೀಳದಿರಲೆಂದು ಅಷ್ಟಕಷ್ಟೆ ಸುಮ್ಮನಾದಳು.

ಮೂರ್ತಿಯ ಭಾರ್ಯೆ ರಾಧಾ ''ಏನಂತೆ? ಏನು ಬೇಕು?'' ಎಂದು ವಿಚಾರಿಸಿದಳು.

ಮಾಲಿನಿ ''ಏನಿಲ್ಲ ಸ್ವಲ್ಪ ಹೊಟ್ಟೆನೋವಂತೆ. ಬೇಡ ಬೇಡ ಅಂದರೂ ತಿನ್ನುವುದು.'' ಎಂದು ಒಂದು ಸಂದರ್ಭೋಚಿತ ಬುರುಡೆ ಬಿಟ್ಟಳು.

ನನ್ನ ಹೊಟ್ಟೆಯೂ ತಾಳ ಹಾಕುತ್ತಿತ್ತು. ಆದರೆ ಪರಿಸ್ಥಿತಿ ಸಂಕಟಕರವಾಗಿತ್ತು. ನಿರಾಶಾದಾಯಕವಾಗಿತ್ತು.

''ಕಾಫಿ ಮಾಡಲೆ?'' ಎಂದು ಔಪಚಾರಕವಾಗಿ ಕೇಳಿದಳು ರಾಧಾ.

ಅವಸರವಾಗಿ ಹೊರಗೆ ಹೊರಡುವವರನ್ನು ನಿಲ್ಲಿಸಿ, ಕಾಫಿಮಾಡಿ ಕೊಟ್ಟು, ನಮ್ಮನ್ನು ಉಪಚರಿಸಿ, ಆ ಮೇಲೆ ನಿಧಾನವಾಗಿ ಹೋಗಿ ಎಂದು ಯಾವನು ತಾನೆ ಹೇಳ್ಯಾನು?

''ಏನೂ ಬೇಡ ಒಂದು ಲೋಟ ನೀರು ಕೊಡಿ. ಪಾಪ ನಿಮಗೆ ಹೊರಡುವ ಅವಸರ'' ಎಂದು ನಿರುಪಾಯರಾಗಿ ಬಿಕ್ಕೊರಳಿನಿಂದ ಹೇಳಿದೆವು.

ಹಸಿದ ಹೊಟ್ಟೆಯನ್ನು ಒಂದೊಂದು ಲೋಟ ನೀರಿನಿಂದ ತಣಿಸದೆವು. ನಾವು ಹೊರಡುವಾಗ ಮೂರ್ತಿ, ''ಬರುವ ಭಾನುವಾರ ಮರೆಯಬೇಡಿ. ಖಂಡಿತ ಬರಬೇಕು.'' ಎಂದು ಜ್ಞಾಪಿಸಿದ. ನಾನು ದುರ್ದಾನ ಹಿಡಿದ ಬ್ರಾಹ್ಮಣನಂತೆ ಹೊರಬಿದ್ದೆ.



Downloaded from https:// www.studiestoday.com


Downloaded from https:// www.studiestoday.com

ಆದರೂ ದೇಶಾವರಿ ನಗೆ ನಕ್ಕು ''ಆಗಲಿ ಬರುತ್ತೇವೆ ಎಂದೆ. ಆಗ ನನ್ನ ತಪ್ಪು ನನಗೆ ಅರಿವಾಯಿತು.'' ಮೂರ್ತಿ ನಮ್ಮನ್ನು ಆಮಂತ್ರಿಸಿದ್ದು ಅದಕ್ಕೆ ಮುಂದಿನ ಭಾನುವಾರ. ಇಪ್ಪತ್ತಲ್ಲ ಇಪ್ಪತ್ತೇಳಕ್ಕೆ ಎಂದು ಅಂದಿದ್ದ. ನಾನು ಇಪ್ಪತ್ತೇಳಲ್ಲ ಇಪ್ಪತ್ತಕ್ಕೆ ಎಂದು ತಿಳಿದುಕೊಂಡಿದ್ದೆ ಅಷ್ಟೆ.

ಕ್ಷುದ್ಬಾಧೆಯ ಜೊತೆಗೆ ಮಾಲಿನಿಯ ವಾಗ್ಬಾಣಗಳ ಬಾಧೆಯನ್ನು ಸಹಿಸುತ್ತಾ ಒಂದು ಊಟದ ಹೊಟೇಲಿಗೆ ಹೋದೆವು, ಅಲ್ಲಾದರೂ ಊಟ ಮುಗಿಸೋಣವೆಂದು ನೆನಸಿ. ಆದರೆ ನಮ್ಮ ದುರದೃಷ್ಟಕ್ಕೆ ಅಲ್ಲಿ ಊಟದ ಸಮಯ ಮಿಂಚಿಹೋಗಿತ್ತು. ಪಕ್ಕದ ರೆಸ್ಟೋರೆಂಟಿಗೆ ಹೋಗಿ ಹೊಟ್ಟೆ ತುಂಬದ ಏನೇನೋ ತಿಂಡಿಗಳನ್ನು ತಿಂದು, ಕಾಫಿ ಸೇವಿಸಿ ಬಸವನಗುಡಿಯ ಬಸ್ಸು ಹತ್ತಿ ಮನೆ ಸೇರಿದೆವು.

ನಾನು ಹಸಿವನ್ನು ಸಹಿಸುತ್ತಾ, ''ರಾತ್ರೆಯ ಊಟವನ್ನಾದರೂ ಬೇಗ ಮಾಡೋಣ'' ಎಂದಾಗ.

ರಾತ್ರೆ ಔತಣಕ್ಕೆ ಯಾರೂ ಕರೆಯಲ್ಲಿಲ್ಲವೆ?'' ಎಂದು ಮಾಲಿನಿ ಮೂದಲಿಸಿ ನಕ್ಕಳು.





Downloaded from https:// www.studiestoday.com

Downloaded from https:// www.studiestoday.com

## ಶಬ್ದಗಳ ಅರ್ಥ

ಔತಣ – ಊಟ; ಸಹಪತ್ನೀಕ – ಗಂಡ, ಹೆಂಡತಿ; ಭದ್ರ – ಗಟ್ಟಿ; ಕ್ಷುದ್ಬಾಧೆ – ಹೊಟ್ಟೆನೋವು; ವಾಗ್ಬಾಣ – ಹರಿತ ಮಾತು.

## ಅಭ್ಯಾಸ


**ಕೃತಿ 1) I. ಕೆಳಗೆ ಕೊಟ್ಟ ಜಾಲಾಕೃತಿಯನ್ನು ಪೂರ್ಣಗೊಳಿಸಿ ಬರೆಯಿರಿ.**

| ಸಾರ್ವಜನಿಕ ಸಾರಿಗೆ | ಸರಕು ಸಾರಿಗೆ | ಒಡೆತನದ ಸಾರಿಗೆ |
|---|---|---|
| ರಿಕ್ಷಾ | | |
| | | |
| | | ಕಾರು |
| | | |
| | ಟ್ರಕ್ | |

**II. ಇಂಗ್ಲಿಷ ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಬರೆಯಿರಿ.**

| | |
|---|---|
| 1) ಬಸ್‌ಸ್ಟ್ಯಾಂಡ್ | |
| 2) ಕಂಡಕ್ಟರ್ | |
| 3) ಕ್ಯೂ | |
| 4) ಬಸ್ಸ್ | |

**III. ಬೆಂಗಳೂರಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಹೆಸರು ಬರೆದು ಪೂರ್ಣಗೊಳಿಸಿರಿ..**




**ಕೃತಿ 2) ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಸಾಲುಗಳಲ್ಲಿ ಉತ್ತರ ಬರೆಯಿರಿ.**

1) ರಾಯರಿಗೆ ಏಕೆ ಸಂತೋಷವಾಗಿತ್ತು?

.......................................................................................................

.......................................................................................................

.......................................................................................................

.......................................................................................................



Downloaded from https:// www.studiestoday.com

Downloaded from https:// www.studiestoday.com

2) ಮೂರ್ತಿ ಮನೆಗೆ ಹೋಗುವಾಗ ರಾಯರ ಪರಿವಾರದವರಿಗೆ ಯಾವ ಅನುಭವಾಯಿತು ?

........................................................................................................

........................................................................................................

........................................................................................................

........................................................................................................

3) ರಾಯರ ಉತ್ಸಾಹಕ್ಕೆ ಏಕೆ ತಣ್ಣೀರೆರಚಿದಂತಾಯಿತು ?

........................................................................................................

........................................................................................................

........................................................................................................

........................................................................................................

**ಕೃತಿ 3) ಕೆಳಗೆ ಕೊಟ್ಟ ಅಕ್ಷರ ಸಮೂಹದಿಂದ ಅರ್ಥಪೂರ್ಣ ಶಬ್ದ ರಚಿಸಿರಿ.**

| ನಿಲಿಮಾ | ನವಸಬ | ರುಕಲೀಮಾ | ಘುಗತಿಪದಂ |
|---|---|---|---|
| | | | |

**ಕೃತಿ 4) ಕೆಳಗೆ ಕಂಸದಲ್ಲಿ ಕೊಟ್ಟ ಯೋಗ್ಯ ಪದವನ್ನು ಬಳಸಿ ವಾಕ್ಯ ಪೂರ್ಣಗೊಳಿಸಿ ಬರೆಯಿರಿ.**

1) ಸೀತಾ ಹೊರಡುವ ಕಾಲದಲ್ಲಿ ಹಟ ಮಾಡಿದಳೆಂದು ಧೊಪ್‌ಧೊಪ್ ಎಂದು ಬೆನ್ನಿನ ಮೇಲೆ ಎರಡು.............
(ಒದ್ದಳು, ಹೊಡೆದಳು, ನೂಕಿದಳು, ಗುದ್ದಿದಳು, ಕಚ್ಚಿದಳು)

2) ಚಲನಚಿತ್ರ ಮಂದಿರಗಳ ಮಾಲೀಕರು ತಪ್ಪದೆ ಮುಂಜಾಗ್ರತೆ .............
(ನೀಡುತ್ತಾರೆ, ಹೇಳುತ್ತಾರೆ, ಹಾಡುತ್ತಾರೆ, ಕೊಡುತ್ತಾರೆ, ಅಳುತ್ತಾರೆ, ನಗತ್ತಾರೆ)

3) ಬಸ್ಸು............. ತಲುಪತ್ತದೋ ಇಲ್ಲವೋ ಎಂದು ಅನುಮಾನಿಸುತ್ತಿದ್ದೆ.
(ಗಾಂಧಿ ಬಜಾರ್, ಲಾಲ್‌ಬಾಗ್, ಕಬುತರಬಾಗ್, ಮಲ್ಲೇಶ್ವರಂ, ನೀಲೇಶ್ವರಂ)

4) ಶಿವರಾಮಯ್ಯನ ಮನೆಯಲ್ಲಿ............. ಕರೆದಿದ್ದಾರೆ.
(ತಿಂಡಿ ತಿನಿಸಕ್ಕೆ, ಅವಲಕ್ಕಿ ತಿನ್ನಲಿಕ್ಕೆ, ಮಜ್ಜಿಗೆ ಕುಡಿಯಲಿಕ್ಕೆ, ಊಟಕ್ಕೆ)

***

94BHJE



Downloaded from https:// www.studiestoday.com

Downloaded from https:// www.studiestoday.com

# 4. ಮಾವ ಕೊಟ್ಟ ರೇಡಿಯೋ

ದೀಪಾವಳಿಯ ಆಗಮನವನ್ನು ಅತ್ಯಾತುರದಿಂದ ನಿರೀಕ್ಷಿಸುತ್ತಿದ್ದೆ. ಮಗಳನ್ನು ಕೊಟ್ಟು, ವರದಕ್ಷಿಣೆ ತೆತ್ತು, ಸಾಲವನ್ನು ಹೊತ್ತು ಸುಸ್ತಾಗಿದ್ದರೂ, ನನ್ನ ಪ್ರೀತಿಯ ಮಾವಯ್ಯ ಪ್ರತಿ ದೀಪಾವಳಿಗೂ ಅಳಿಯನಿಗೆ ಉಡುಗೊರೆಯನ್ನು ತಪ್ಪಿಸಿಲ್ಲ.

ನಮ್ಮ ಮೊದಲನೆಯ ಪಂಚವಾರ್ಷಿಕ ಯೋಜನೆಯಂತೆ ಕಳೆದ ಐದು ವರ್ಷಗಳಿಂದ ದೀಪಾವಳಿಯ ಸಡಗರದ ಉಡುಗೊರೆಯ ರೂಪವಾಗಿ ರಿಸ್ಟ್ ವಾಚ್, ಉಲ್ಲನ್ ಸೂಟು, ಶಾಲು, ಧೋತರ, ಉಂಗುರ ಇತ್ಯಾದಿಗಳನ್ನು ಪಡೆದದ್ದಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ದೇಶವು ಅಭ್ಯುದಯದ ಹಾದಿಯಲ್ಲಿ ನಡೆಯುತ್ತಿರುವಂತೆ ನಾನೂ ಪ್ರಗತಿಪರ ಹೆಜ್ಜೆಯನ್ನಿಡಲು ಯೋಚಿಸಿದೆ. ಭಾರೀ ಉಡುಗೊರೆಯನ್ನೇ ಗಿಟ್ಟಿಸೋಣವೆಂದು ನೆನಸಿದೆ.

ನೆರೆಮನೆಯ ರಂಗಸ್ವಾಮಿ ಹೊಸದಾಗಿ ಕೊಂಡ ರೇಡಿಯೋವನ್ನು ಯಾವಾಗಲೂ ತಿರುಗಿಸುತ್ತಿರುವಾಗ ಅಲ್ಲಿಂದ ಅಸ್ಪಷ್ಟವಾಗಿ ಆದರೆ ಅನಂತರವೂ ತೇಲಿ ಬರುತ್ತಿದ್ದ ಸಂಗೀತವನ್ನು ಕೇಳುತ್ತಿದ್ದ ನನಗೆ ಅಸೂಯೆಯೂ, ರೇಡಿಯೋ ಪಡೆಯುವ ಆಕಾಂಕ್ಷೆಯೂ ಏಕಕಾಲದಲ್ಲಿ ಉದ್ಭವಿಸಿದವು. ಅದರಲ್ಲೂ ನಮ್ಮ ಮನೆಯಲ್ಲಿ ನನ್ನ ಕೈಗಡಿಯಾರ, ಟೈಂ ಪೀಸುಗಳೆರಡೂ ಇದ್ದಕ್ಕಿದ್ದಂತೆ ಒಮ್ಮತದಿಂದ ನಿದ್ದೆ ಹೋಗುತ್ತಿದ್ದಾಗ ಅವನೊಡನೆ ಘಂಟೆ ಕೇಳಿದರೆ ಅವನು ಘಂಟೆ ಹೇಳಿ, ''ಕರೆಕ್ಟ್ ರೇಡಿಯೋ ಟೈಮ್'' ಎಂಬ ವಿಶೇಷಣದಿಂದ ಮಾತನ್ನು ಒಂದು ತರದ ಹೆಮ್ಮೆಯಲ್ಲಿ ಮುಕ್ತಾಯಗೊಳಿಸುತ್ತಿದ್ದುದು ನನ್ನ ಆಕಾಂಕ್ಷೆಯ ಅನಲಕ್ಕೆ ಆಜ್ಯಾಹುತಿ ಯಾಯಿತು.

ಅಂದು ದೀಪಾವಳಿಗೆ ಒಂದು ತಿಂಗಳ ಹಿಂದೆ ಮಾವಯ್ಯ ಬಂದಾಗ ರೇಡಿಯೋದ ಮೇಲೆ ಒಂದು ಪುಟ್ಟ ಭಾಷಣವನ್ನೇ ಪ್ರಾರಂಭಿಸಿಬಿಟ್ಟ, ಮಾಲಿನಿಯೂ ನನ್ನ ಮಾತಿಗೆ ಪ್ರತಿಯಾಡದೆ ನನ್ನ ಇಷ್ಟವನ್ನು ಪುಷ್ಟೀಕರಿಸಿದಳು. ಅಂತೂ ದೀಪಾವಳಿಯ ಉಡುಗೊರೆ ರೇಡಿಯೊ ಎಂದು ನಿಶ್ಚಯವಾಯಿತು. ಮಾವಯ್ಯನಿಗೆ ಬೇರೆ ದಾರಿಯೇ ಇರಲಿಲ್ಲ.

ಮಾವಯ್ಯನಿಗೆ ಜಿಪುಣರೆಂಬ ವಿಶೇಷಣ ಖಂಡಿತ ಸಲ್ಲದು. ಮಿತವ್ಯಯಿಯೆಂದು ಧಾರಾಳವಾಗಿ ಹೇಳಬಹುದು. ಮೂರು ಖರ್ಚು ಮಾಡ ಬೇಕಾದಾಗ ಎರಡರಲ್ಲೇ ಮುಗಿಸೋಣವೆಂಬ ಮನೋಭಾವ ಅವರದು. ಹಾಗೆ ಮುಂಜಾಗರೂಕರಾಗಿ ಮಿತವ್ಯಯಿಗಳಾಗದಿದ್ದರೆ ಅಳಿಯನಿಗೆ ಸಂದರ್ಭಾನುಸಾರ ಸಮರ್ಪಕವಾಗಿ ಸಹಾಯ ಸಂಭಾವನೆಗಳನ್ನಿತ್ತು ಅವನನ್ನು ಸಂತೋಷಗೊಳಿಸುವ ಸಾಮರ್ಥ್ಯ ಅವರಿಗೆ ಹೇಗೆ ಬರುತ್ತಿತ್ತು?

ಈ ಉಡುಗೊರೆಯ ಕಾಟದಿಂದ ಹೇಗಾದರೂ ಪಾರಾಗೋಣವೆಂದು ನಿಶ್ಚಯಿಸಿದ ಮಾವಯ್ಯ ಸಾಯಂಕಾಲವೇ ರೇಡಿಯೋ ದರ್ಶನಕ್ಕೆ ಹೊರಡೋಣವೆಂದರು, ನಾವು ರಾಮಯ್ಯನ ''ಲಕ್ಕಿ ರೇಡಿಯೋ ಹೌಸ್''ಗೆ ಹೋದೆವು. ಮಾವಯ್ಯನಿಗೆ ರಾಮಯ್ಯನ ಪರಿಚಯವಾದದ್ದು ಅವರ ಸ್ನೇಹಿತ ವೆಂಕಟರಾಯರ ಮೂಲಕ. ಒಂದು ಸಲ ಮಾವಯ್ಯನ ರೇಡಿಯೋ ಕೈಕೊಟ್ಟಾಗ ವೆಂಕಟರಾಯರ ಸಲಹೆಯಂತೆ ರಾಮಯ್ಯನ ಕೈಗೆ ಕೊಟ್ಟರಂತೆ ಏನೋ ಒಂದು ಸೋಲ್ಡರ್ ಮಾಡಿ ಐದೇ ನಿಮಿಷದಲ್ಲಿ ರೇಡಿಯೋವನ್ನು ಸರಿಪಡಿಸಿ ಇಪ್ಪತ್ತೇ ರೂಪಾಯಿ ಛಾರ್ಜ ಮಾಡಿದನಂತೆ. ಅದರಿಂದ ಅವನು ಅದ್ಭುತ ಕೆಲಸಗಾರನೆಂಬ ಭಾವನೆ ಮಾವಯ್ಯನಲ್ಲಿ ಮೂಡಿತ್ತು.

ರಾಮಯ್ಯ ನಮಗೆ ಹಲವು ರೇಡಿಯೋಗಳನ್ನು ತೋರಿಸಿದ. 5 ವಾಲ್ವ್ 3 ಬ್ಯಾಂಡುಗಳಿಂದ ಹಿಡಿದು, 8 ವಾಲ್ವ್ 6 ಬ್ಯಾಂಡುಗಳವರೆಗಿನ, ಎಸ್/ಡಿಸಿಯ; ಫಿಲಿಪ್ಸ್, ಮರ್ಫಿ, ಬುಷ್, ಪೈ, ಹಿಸ್ ಮಾಸ್ಟರ್ಸ್ ವಾಯ್ಸ್, ನ್ಯಾಷನಲ್ ಎಕ್ಕೊ ಇತ್ಯಾದಿ ಹಲವಾರು ವಿಧದ, ಮುನ್ನೂರರಿಂದ ಎಂಟುನೂರು ರೂಪಾಯಿವರೆಗಿನ ರೇಡಿಯೋಗಳನ್ನು ತೋರಿಸಿದ. ಕೆಲವನ್ನು ಸ್ವಿಚ್ ಮಾಡಿ ಹಾಡಿಸಿದ. ಲಂಡನ್, ಮಾಸ್ಕೊ, ಮದರಾಸ್, ಬೊಂಬಾಯಿ, ಬೆಂಗಳೂರು ಮೊದಲಾದ ಸ್ಟೇಷನುಗಳಿಗೆ ತಿರುಗಿಸಿದ. ಬೆಲೆಯನ್ನು ಕೇಳಿದಾಗ ಮಾವಯ್ಯನಿಗೆ ಸ್ವಲ್ಪ ತಲೆ ತಿರುಗಿತು.



Downloaded from https:// www.studiestoday.com

Downloaded from https:// www.studiestoday.com

''ಕಮ್ಮಿ ಬೇಲೆದ್ದು ಯಾವುದಾದರೂ ಇಲ್ಲವೆ?''

''ಏನು, ಸೆಕೆಂಡ್ ಹ್ಯಾಂಡ್ ಬೇಕೆನ್ನುತ್ತೀರಾ? ಎಂದು ರಾಮಯ್ಯ ಕೇಳಿದ.

''ಸೆಕೆಂಡ್ ಹ್ಯಾಂಡ್ ಬೇಡ ಹೊಸದೇ ಇರಲಿ. ಬೆಲೆ ಸ್ವಲ್ಪ ಕಡಿಮೇದ್ದು'' ಎಂದು ನನ್ನ ಮುಖ ನೋಡಿದರು ಮಾವಯ್ಯ.

''ಹೌದು ಬೆಲೆ ಕಡಿಮೆಯಾದರೂ ರೇಡಿಯೋ ಚೆನ್ನಾಗಿರಬೇಕು. ಕೆಬಿನೆಟ್ ಚೆಲೋದಿರಬೇಕು'' ಎಂದು ನಾನು ಸೂಚಿಸಿದೆ. ''ಹಾಗಾದರೆ ಒಂದು ಎಸೆಂಬ್ಲ್ ಮಾಡಿಸಿಬಿಡಿ'' ಎಂದು ರಾಮಯ್ಯನೆಂದ.

''ನೀವೇ ಮಾಡುತ್ತೀರೇನು? ಎಲ್ಲಾ ಒಟ್ಟು ಎಷ್ಟಾಗುತ್ತೆ?'' ಎಂದು ಮಾವಯ್ಯ ಕೇಳಿದರು ಕುತೂಹಲದಿಂದ.

ರಾಮಯ್ಯ ಪೆನ್ ಪೇಪರು ತೆಗೆದುಕೊಂಡು ಲೆಖ್ಖ ಹಾಕಿ ತೋರಿಸಿದ. ಒಳ್ಳೆಯ ಮರದ ಕ್ಯಾಬಿನೆಟ್ ಸೇರಿ ಇನ್ನೂರ ಎಪ್ಪತ್ತಾರು ರೂಪಾಯಿಯಾಗುತ್ತದೆ'' ಎಂದ. ಅರ್ಧ ಘಂಟೆ ಚರ್ಚೆ ನಡೆದು ಇನ್ನೂರ ಮೂವತ್ತೆರಡಕ್ಕೆ ಇಳಿದು ''ಎರಡು ವರ್ಷ ಗ್ಯಾರಂಟಿ, ಫ್ರೀ ಸರ್ವಿಸ್'' ಎಂದು ಭರವಸೆಯಿತ್ತ.

ನಾನೂ ನಸುನಗೆಯಿಂದ ಸಮಾಧಾನ ವ್ಯಕ್ತಪಡಿಸಿದೆ. ಮಾವಯ್ಯನವರು ಒಪ್ಪಿ ಎಡ್ವಾನ್ಸ್ ಕೊಟ್ಟರು. ದೀಪಾವಳಿಗೆ ಸರಿಯಾಗಿ ನನಗೆ ತಲುಪಿಸುವಂತೆ ರಾಮಯ್ಯ ಸಮ್ಮತಿಸಿದ.

ಅಂದು ಶನಿವಾರ. ಸಾಯಂಕಾಲ ಚಲಚ್ಚಿತ್ರಕ್ಕೆ ಹೋಗುವ ಪ್ರೋಗ್ರಾಮನ್ನು ನಿಲ್ಲಿಸಿ, ರೇಡಿಯೋ ತಿರಿಗಿಸುತ್ತಾ ಕುಳಿತಿರುವುದೆಂದು ನಿಶ್ಚಯಿಸಿ ವಾಗ್ದಾನದಂತೆ ರೇಡಿಯೋ ಸಮೇತನಾದ ರಾಮಯ್ಯನ ಆಗಮನವನ್ನೇ ಅತ್ಯಾತುರದಿಂದ ನಿರೀಕ್ಷಿಸುತ್ತಿದ್ದೆವು. ಏಳು ಘಂಟೆಯಾದರೂ ರಾಮಯ್ಯ ಬರಲಿಲ್ಲ. ಮಾಲಿನಿಯ ಸಹನೆ ಸರಿದು ಮುನಿಸು ಮಾಡಿತು ಅವಳು ಉರಿದು ಮೂದಲಿಸಿ ಎಡೆತಡೆಯಿಲ್ಲದೆ ಮಾತಿನ ಮಳೆಗರೆದಳು. ಕೊನೆಗೆ ನಾನೇ ಹೊರಟೆ.

ರಾಮಯ್ಯ ರೇಡಿಯೊ ಪಾರ್ಟುಗಳನ್ನು ಜೋಡಿಸಿ, ವಯರುಗಳನ್ನು ಅಂಟಿಸಿ, ಬಟನುಗಳನ್ನು ತಿರುಗಿಸುತ್ತಾ ಕೆಲಸ ಮಾಡಿಕೊಂಡಿದ್ದ ರೇಡಿಯೋ ಪೂರ್ತಿಯಾಗುವ ಅಂತ್ಯ ಘಟ್ಟಕ್ಕೆ ಬಂದಿತ್ತು.

''ಎಲ್ಲಾ ಸರಿಯಾಗಿದೆ, ಎಲ್ಲೋ ಕೊಂಚ ಮಿಸ್ಟೇಕಿದೆ. ಸರಿಪಡಿಸಿ ಈ ಹೊತ್ತೆಲ್ಲಾ ನೋಡಿ, ನಾಳೆ ತಂದು ಕೊಡುತ್ತೇನೆ'' ಎಂದ.

''ಇಲ್ಲ ಸಾಧ್ಯವಿಲ್ಲ, ಈ ಹೊತ್ತು 9॥ ಘಂಟೆಗೆ ಮದರಾಸಿನಲ್ಲಿ ಸುಬ್ಬಲಕ್ಷ್ಮಿಯ ಸಂಗೀತವಿದೆ'' ಎಂದು ನಾನು ಒತ್ತಾಯಪಡಿಸಿದೆ.

''ಹಾಗಾದರೆ ಸರಿ. 8॥ ಘಂಟೆಗೆ ಖಂಡಿತ ತಂದುಕೊಡುತ್ತೇನೆ'' ಎಂದು ಹೇಳುತ್ತಾ ಕೆಲಸ ಮುಂದುವರಿಸಿದ.

ನಾನು ಮನೆ ಸೇರಿದಾಗ ಆತುರದಿಂದ ಕಾದು ಬೇಸರಗೊಂಡು ಬಾಗಿಲಲ್ಲೇ ನಿಂತಿದ್ದ ಮಾಲಿನಿ,

''ಏನು? ಯಾವಾಗ ಬರುತ್ತೆ? ಮದರಾಸಿನ ಪ್ರೋಗ್ರಾಂ ಮುಗಿದ ಮೇಲೆಯೆ?'' ಎಂದು ಬಿಂಕದಿಂದ ಕೊರಳು ಕೊಂಕಿಸಿ ಕೇಳಿದಳು.

''ಇಲ್ಲ ಕಣೆ. ಇನ್ನು ಅರ್ಧ ಘಂಟಿಯೊಳಗೆ ಖಂಡಿತ ತಂದು ಕೊಡುತ್ತಾನೆ. ಅಷ್ಟರೊಳಗೆ ನಾವು ಊಟ ಮುಗಿಸಿಬಿಡೋಣ. ಮಧ್ಯ ತೊಂದರೆ ಯಾಕೆ?'' ಎಂದು ಊಟಕ್ಕೆ ತ್ವರೆಪಡಿಸಿದೆ.

ನೆರೆಮನೆಯಿಂದ ರೇಡಿಯೋ ಸಿಲೋನಿನಿಂದ ನಮಗೆ ಆಶ್ವಸನವೀಯಲೋ ಎಂಬಂತೆ,

''ರಾಮಯ್ಯ ವಸ್ತಾವಯ್ಯ, ಓ ರಾಮಯ್ಯ ವಸ್ತಾವಯ್ಯ'' ಎಂದು ಹಾಡು ಕೇಳಿ ಬರುತ್ತಿತ್ತು.

ಬೇಗನೆ ಊಟ ತೀರಿಸಿ, ಸುಬ್ಬಲಕ್ಷ್ಮಿಯ ಸುಶ್ರಾವ್ಯ ಸಂಗೀತವನ್ನು ಕೇಳಿ ಸಂತೋಷಪಡಲು ಸುಸಜ್ಜಿತರಾಗಿ ಕುಳಿತೆವು. ರಾಮಯ್ಯ ಬಂದನೊ? ರೇಡಿಯೋ ತಂದನೊ? ಎಂದು ನೋಡಲು ಎರಡು ಮೂರು ಸಲ ಗೇಟು ತನಕ ಹೋಗಿ ಬಂದೆ.



Downloaded from https:// www.studiestoday.com

Downloaded from https:// www.studiestoday.com

''ಮಾವಯ್ಯ ಕೊಟ್ಟರೂ ರಾಮಯ್ಯ ಬಿಡನಲ್ಲ'' ಎಂದು ಗೊಣಗಿದೆ.

ಘಂಟೆ ಒಂಭತ್ತಾಯಿತು. ನಾನು ಪುನಃ ಹೊರಡಬೇಕೆಂದಿದ್ದೆ. ಅಷ್ಟರಲ್ಲಿ ರಾಮಯ್ಯ ರೇಡಿಯೋ ಹೊರಿಸಿಕೊಂಡು ಬಂದ. ರೇಡಿಯೋ ನೋಡಿ ನನಗೆ ಅತ್ಯಾನಂದವಾಯಿತು. ''ಆಹಾ! ಭಾರಿ ರೇಡಿಯೋವನ್ನೇ ಮಾಡಿದ್ದಾನೆ!' ಅಂದುಕೊಂಡೆ. 800 ರೂಪಾಯಿಯ ರೇಡಿಯೋ ಕೂಡಾ ಅಷ್ಟು ದೊಡ್ಡದಿರಲಾರದು. ನೋಡಲು ಮನಮೋಹಕವಾಗಿತ್ತು. ಮಾವನಿಗೆ ದೀರ್ಘಾಯುಷ್ಯ ಕೊಡಲಿ ಎಂದು ದೇವರನ್ನು ಪ್ರಾರ್ಥಿಸಿದೆ. ನನ್ನನ್ನು ನಾನೇ ಅಭಿನಂದಿಸಿಕೊಂಡೆ. ಮಾಲಿನಿಯು ಮನಿಸಿನ ಮುಖದಲ್ಲೂ ಇನಿಸು ನಸುನಗೆ ಲಾಸ್ಯವಾಡಿತು. ನಮ್ಮ ಪುಟ್ಟ ಗೀತಾ ಕೂಡ ''ರೇಡಿಯೋ'' ಎಂದು ಸಂತೋಷಪಟ್ಟಳು.

ರಾಮಯ್ಯ ಸ್ವತಃ ಏರಿಯಲ್ ಕಟ್ಟಿ ಹಾಲಿನಲ್ಲಿ ಅದಕ್ಕಾಗಿ ಕಾದು ಕೊಂಡಿದ್ದ ಉಚ್ಚಾಸನದ ಮೇಲೆ ರೇಡಿಯೋವನ್ನು ಸ್ಥಾಪಿಸಿದ.

''ಇನ್ನು ಸಂಗೀತ ಪ್ರೋಗ್ರಾಮಿಗೆ ಹತ್ತೇ ನಿಮಿಷ ಉಳಿದಿದೆ. ಮದ್ರಾಸಿಗೆ ತಿರುಗಿಸಿ'' ಎಂದೆ.

ರಾಮಯ್ಯ ಸ್ವಿಚ್ ಹಾಕಿದ, ಬ್ಯಾಂಡನ್ನು ಶಾರ್ಟ್‌ವೇವಿಂಗೆ ಬದಲಾಯಿಸಿ, ಮದರಾಸಿನ ಸೂಜಿಯನ್ನು ತಿರುಗಿಸಿದ. ''ಗೊಂಯಿ'' ಎಂದು ಎರಡು ನಿಮಿಷ ಶಬ್ದ ಹೊರಟಿತು. ''ಎಟ್‌ಮಸ್ ಫಿಯರಿಕ್ ಡಿಸ್ಟರ್ಬೆನ್ಸ್'' ಎಂದು ಸಮಾಧಾನ ಹೇಳಿದ.

ಐದು ನಿಮಿಷ ಕಳೆಯಿತು. ಏನೋ ಹಾಡುತ್ತಿರುವುದು ಸ್ಪಷ್ಟವಾಗಿ ಕೇಳಿಬಂತು. ಪಕ್ಕದಲ್ಲಿ ಭಾಷಣ, ಮಧ್ಯೆ ವಾದ ಸಂಗೀತ, ಮರಾಠಿ, ಹಿಂದಿ, ಇಂಗ್ಲಿಷ್ ಎಲ್ಲಾ ಒಟ್ಟಿಗೆ ಕೇಳಿಸಿತು. ಅಂತೂ ಶಬ್ದ ಹೊರಡುತ್ತಿತ್ತು. ಸ್ವಲ್ಪ ಹೊತ್ತಾಗುತ್ತಲು ''ಭೊಂ'' ಎಂದು ಶಬ್ದವಾದ್ಯ ಪ್ರಾರಂಭವಾಯಿತು. ಸಿಳ್ಳು ಹಾಕಿದ ಧ್ವನಿ ಕೇಳಿಸಿತು. ರಾಮಯ್ಯ ಬಿಚ್ಚಿ ಏನೋ ಸ್ಕ್ರೂ ತಿರುಗಿಸಿದ. ಅದು ಸರಿಯಲ್ಲವೆಂದು ಇನ್ನೇನನ್ನೋ ಬಿಚ್ಚಿ ನೋಡಿದ. ಯಾವುದಕ್ಕೂ ಬಗ್ಗದ ಮೊಂಡು ಹುಡುಗನಂತೆ ರೇಡಿಯೋ ಪ್ರತಿಭಟಿಸಿತು. ಸ್ವಲ್ಪ ಹೊತ್ತು ತಟಸ್ಥವಾಯಿತು. ಪುನಃ ''ಕೂಂ, ಸುಂಯಿ'' ಎಂದು ಮೊರೆಯಿತು. ಹಾಡುಬಿಟ್ಟು ಮಿಕ್ಕೆಲ್ಲ ಶಬ್ದ ಮಾಡತೊಡಗಿತ್ತು. ಒಮ್ಮೆ ಇಲಿಯಂತೆ ಚಿಲಿಪಿಲಿಗುಟ್ಟಿತು. ಮತ್ತೊಮ್ಮೆ ಹೆಗ್ಗಣದಂತೆ ಗುರುಗುಟ್ಟಿತು. ಬೇರೊಮ್ಮೆ ಕಪ್ಪೆಯಂತೆ ಒಟಗುಟ್ಟಿತು, ಹಂದಿಯಂತೆ ಡುರಕೆಂದಿತು. ಕುದುರೆಯಂತೆ ಕೆನೆಯಿತು, ಆನೆಯಂತೆ ಘೀಳಿಟ್ಟಿತು, ಗೂಂ ಎಂದು ಗೋಳಿಟ್ಟಿತು.

ಮದ್ರಾಸಿನ ಪ್ರೋಗ್ರಾಂ ಮುಗಿಯಿತು. ಸುಬ್ಬುಲಕ್ಷ್ಮಿಯ ಸಂಗೀತಕ್ಕೆ ಬದಲು ನಾದಬ್ರಹ್ಮನ ವಿವಿಧ ವಿನೋದ ನಾದಲಹರಿಯಲ್ಲಿ ತಲ್ಲೀನನಾಗುವ ತಲೆವಿಧಿಯಾಯಿತು. ಗೀತಾ ನಿದ್ದೆ ಹೋಗಿದ್ದಳು. ನಾನು 'ಹೀಗಾಯಿತೆ?'' ಎಂದು ಗೊಣಗಿದ ರಾಮಯ್ಯ, ''ನಾಳೆ ತೆಗೆದುಕೊಂಡು ಬನ್ನಿ ಎಲ್ಲಾ ಸರಿಮಾಡುತ್ತೇನೆ'' ಎಂದು ಭರವಸೆಯಿತ್ತು ಅವನ ಮನೆಯತ್ತ ಹೊರಟ.

ಮರುದಿನ ರೇಡಿಯೋವನ್ನು ಹೊರಿಸಿಕೊಂಡು ಹೋದೆ. ರಾಮಯ್ಯ ''ಇರಲಿ'' ಒಂದು ವಾರ ಬಿಟ್ಟುಕೊಂಡು ಬನ್ನಿ. ಎಲ್ಲಾ ಪರ್ಫೆಕ್ಟ್ ಮಾಡಿ ಕೊಡುತ್ತೇನೆ, ಎಂದ.

ಒಂದು ವಾರ ಕಳೆಯಿತು. ಇನ್ನೊಂದು ವಾರ ಸರಿಯಿತು. ಹಲವು ಸಾರಿ ಅಲೆದು ಪುನಃ ರೇಡಿಯೋವನ್ನು ತಂದೆ. ಒಂದೆರಡು ದಿನ ಏನೋ ಸ್ವಲ್ಪ ಸರಿಯಾಗಿತ್ತು. ಮತ್ತೆ ಪುನಃ ಸತ್ಯಾಗ್ರಹ ಮಾಡಿತು. ಹೀಗೆ ತಿಂಗಳಲ್ಲಿ ಇಪ್ಪತ್ತೈದು ದಿವಸ ಅದಕ್ಕೆ ''ಲಕ್ಕಿ ಹೌಸ್'' ವಾಸವಾಯಿತು.

ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ, ರೋಗಿಯನ್ನು ಜಾಗರೂಕತೆಯಿಂದ ನೋಡಿಕೊಳ್ಳುವಂತೆ ಮಿಕ್ಕ ದಿವಸಗಳಲ್ಲಿ ರೇಡಿಯೋವನ್ನು ನೋಡಿಕೊಳ್ಳುತ್ತಿದ್ದೆ. ಬಹು ಮೆತ್ತಗೆ ಧ್ವನಿ ಬರುವಂತೆ ತಿರುಗಿಸಿ ಒಂದು ಪಕ್ಕದಲ್ಲಿ ನಾನು ಇನ್ನೊಂದು ಪಕ್ಕದಲ್ಲಿ ಮಾಲಿನಿ ಪಿಸು ಮಾತನ್ನು ಆಲಿಸಿ ಕೇಳುವಂತೆ ಅದರ ಮೇಲೆ ಬಿದ್ದೇ ಕೇಳುತ್ತಿದ್ದೆವು. ಹೀಗಾದರೂ ನಿತ್ಯ ರೋಗಿಯಂತೆ ನಮ್ಮ ರೇಡಿಯೋ ಕೂಡಾ ಆಗಾಗ್ಗೆ ರೇಡಿಯೋ ಡಾಕ್ಟರನ ದರ್ಶನ ಮಾಡಬೇಕಾಯಿತು. ಆದರೆ ಡಾಕ್ಟರು ಪೂರ್ಣ ಡಾಕ್ಟರಾಗಿಲ್ಲ, ಶತಹತ್ಯ ಮಾಡಿ ಪಂಡಿತನಾಗುವ ಹಾಗೆ ನೂರು ರೇಡಿಯೋ ಕೆಡಿಸಿ ರಾಮಯ್ಯ ರೇಡಿಯೋ ಡಾಕ್ಟರಾಗಬೇಕು. ಇನ್ನೂ




Downloaded from https:// www.studiestoday.com

Downloaded from https:// www.studiestoday.com

ಕಲಿಯುತ್ತಿದ್ದಾನೆ. ಅವನು ''ಲಕ್ಕಿ ಹೌಸ್'' ಪ್ರಯೋಗಶಾಲೆ, ನಮ್ಮ ರೇಡಿಯೋ ಕೂಡ ಒಂದು ಪ್ರಯೋಪಕರಣವಾಗುವ ಸುಯೋಗವನ್ನು ಪಡೆದಿದೆ. ಅಂತೂ ಸದಾ ರೇಡಿಯೊ ಹೊರಿಸಿಕೊಂಡು ಹೋಗುತ್ತಿದ್ದನನ್ನು ಕಂಡ ಸ್ನೇಹಿತರು ''ಏನು? ರೇಡಿಯೋ ವ್ಯಾಪಾರ ಪ್ರಾರಂಭಿಸಿದ್ದೀರೋ? ಪರವಾಗಿಲ್ಲ?'' ಎನ್ನುತ್ತಿದ್ದರು.

ಒಂದು ವರ್ಷದಿಂದ ಈ ರೇಡಿಯೋ ಸಹವಾಸ ಸಾಕಾಗಿ ಹೋಯಿತು ನನಗೆ. ಇನ್ನು ಅದರ ತಂಟೆಯೇ ಬೇಡವೆಂದು ಅದರ ಸ್ಥಾನದಲ್ಲಿ ಭದ್ರವಾಗಿ ಇಟ್ಟಿದ್ದೇನೆ. ಭೂಷಣಕ್ಕಾಗಿಯಾದರೂ ಇರಲಿ ಎಂದು ''ಭೋಜನದಾದರೂ ಭಾಜನ ದೊಡ್ಡದು ಎಂಬಂತೆ ರೇಡಿಯೋ ಕ್ಯಾಬಿನೆಟ್ ಬಹುದೊಡ್ಡದು. ನೋಡಲು ಬಲು ಅಂದವಾಗಿದೆ. ಡಾಕ್ಟರು ಇಂಜೆಕ್ಷನ್ ಚುಚ್ಚಿ ರೋಗಿಯನ್ನು ಸಾಯದ ಸ್ಥಿತಿಯಲ್ಲಿರಿಸುವಂತೆ ಹಾಗೂ ಹೀಗೂ ತಿರುಗಿಸಿ ಬೆಂಗಳೂರು ಸ್ಟೇಷನು ನಿಧಾನವಾಗಿ ಕೇಳಿಸುವಂತೆ ರಾಮಯ್ಯ ಸರಿಮಾಡಿದ. ಬದುಕಿದಷ್ಟು ಸಮಯ ಬದುಕಲಿ ಎಂದು ಈಗ ಪಕ್ಕದ ಮನೆಯ ರೇಡಿಯೋವನ್ನೇ ಗೋಡೆಗೆ ಕಿವಿಗೊಟ್ಟು ಕೇಳುತ್ತೇವೆ. ನೆಂಟರಿಷ್ಟರು ಯಾರಾದರೂ ಬಂದಾಗ ಮಾತ್ರ ''ಬೆಂಗಳೂರಿನಲ್ಲಿ ಒಳ್ಳೆಯ ಪ್ರೊಗ್ರಾಮಿದೆ'' ಎಂದು ಹತ್ತು ನಿಮಿಷ ತಿರುಗಿಸಿ ಮತ್ತೆ ನಿಲ್ಲಿಸಿಬಿಡುತ್ತೇನೆ.

ಮಾವಯ್ಯ ಉಡುಗೊರೆಯಾಗಿ ಕೊಟ್ಟ ರೇಡಿಯೋ ಕೈಕೊಟ್ಟರೂ, ಧಾರೆ ಎರೆದು ಕೊಟ್ಟ ನಾನು ಕೈಹಿಡಿದ ರೇಡಿಯೋ ಸದಾ ಒಲಿದು ನಲಿದು ನುಡಿಯುತ್ತಿದೆ. ಹೀಗೆ ಕಾಲ ನಿಯಮವಿಲ್ಲದೆ ಪ್ರೀತಿಯನ್ನು ಸೂಸುವ ಮಾತಿನ ಚೇತನವಿರುವಾಗ ಮತ್ತಿನ್ನೇತರ ಕಾತರ? ಭೂಷಣಕ್ಕೊಂದು ರೇಡಿಯೋ, ಭಾಷಣಕ್ಕೊಂದು ರೇಡಿಯೋ ಇರಲಿ'' ಎಂದು ನೆಮ್ಮದಿಯಿಂದ ಸುಮ್ಮಗಿದ್ದೇನೆ.





Downloaded from https:// www.studiestoday.com


Downloaded from https:// www.studiestoday.com

## ಶಬ್ದಗಳ ಅರ್ಥ


ಉಡುಗೊರೆ – ಬಟ್ಟೆಬರೆಗಳು; ಗಿಟ್ಟಿಸು – ಪಡೆದುಕೊಳ್ಳು; ಅನಲ – ಬೆಂಕಿ; ಆಜ್ಯಾಹುತಿ – ತುಪ್ಪಿನ ಆಹುತಿ; ಕೊಂಚ – ಸ್ವಲ್ಪ; ಮೊಂಡ – ಹಟ; ಕೆನೆ – ಕೂಗು, ಒದರು; ಭಾಜನ – ಪಾತ್ರೆ

## ಅಭ್ಯಾಸ

**ಕೃತಿ 1) I. ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**II. ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**III. ಪಾಠದಲ್ಲಿ ಬಂದಿರುವ ಇಂಗ್ಲಿಷ ಪದಗಳನ್ನು ಬರೆಯಿರಿ.**

ಉದಾ:– ಛಾರ್ಜ್ – ........... ........... ........... ...........



Downloaded from https:// www.studiestoday.com

Downloaded from https:// www.studiestoday.com

**ಕೃತಿ 2) ಕೆಳಗಿನ ಮಾತುಗಳು ಯಾರು - ಯಾರಿಗೆ ಅಂದರು ಹೇಳಿರಿ.**

1) ''ಕಮ್ಮಿ ಬೆಲೆದ್ದು ಯಾವುದಾದರು ಇಲ್ಲವೆ?

2) ''ಏನು, ಸೆಕೆಂಡ್ ಹ್ಯಾಂಡ್ ಬೇಕೆನ್ನತ್ತೀರಾ?''

3) ''ಇಲ್ಲ ಸಾದ್ಯವಿಲ್ಲ, ಈ ಹೊತ್ತು 9॥ ಘಂಟೆಗೆ ಮದರಾಸಿನಲ್ಲಿ ಸುಬ್ಬಲಕ್ಷ್ಮಿಯ ಸಂಗೀತವಿದೆ''.

**ಕೃತಿ 3) I. ಪ್ರಸಿದ್ಧ ಸಂಗೀತಗಾರರ ಹೆಸರುಗಳನ್ನು ಬರೆಯಿರಿ.**

ಪ್ರಸಿದ್ಧ ಶಹನಾಯಿ ..........................................

ಪ್ರಸಿದ್ಧ ತಬಲಾವಾದಕ ..........................................

ಪ್ರಸಿದ್ಧ ವೀಣಾ ವಾದಕ ..........................................

ಪ್ರಸಿದ್ಧ ಗಾಯಕ ..........................................

**II. ಕೆಳಗಿನ ಶಬ್ದಗಳಿಗೆ ಅರ್ಥ ಬರೆದು ಅವುಗಳನ್ನು ನಿನ್ನ ವಾಕ್ಯದಲ್ಲಿ ಉಪಯೋಗಿಸಿರಿ.**

ಅದ್ಭುತ, ಕುತೂಹಲ, ಅತ್ಯಾತುರ, ಬಿಡುಗಡೆ

***

94KIL2



Downloaded from https:// www.studiestoday.com

Downloaded from https:// www.studiestoday.com

# 5. ನ್ಯಾಯಮಂತ್ರಿ

ಈ ದೃಶ್ಯಭಾಗವನ್ನು 'ತಿರುಕ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ಶ್ರೀ, ರಾಘವೇಂದ್ರ ಸ್ವಾಮಿಗಳು ಬರೆದಿರುವ 'ನ್ಯಾಯ ಮಂತ್ರಿ' ಎಂಬ ನಾಟಕದಿಂದ ಆರಿಸಿ ಕೊಂಡಿದೆ ಇದೊಂದು ಐತಿಹಾಸಿಕ ನಾಟಕ.

ಇಂದು ಕರ್ನಾಟಕದ ಉದ್ದಗಲಕ್ಕೂ ಮನೆಮಾತಾಗಿರುವ ಶ್ರೀಶ್ರೀ ರಾಘವೇಂದ್ರ ಸ್ವಾಮಿಜಿಯವರು ಈಗ ಸುಮಾರು ಅರ್ಧ ಶತಮಾನದ ಕೆಳಗೆ ಕನ್ನಡನಾಡಿನ ನೆಲದ ಮೇಲೆ ಕಾಣಿಸಿಕೊಂಡರು. ಅಂದು ಅವರು ಮಹಾತ್ಮ ಗಾಂಧೀಜಿಯವರ ಸ್ವಾತಂತ್ರ್ಯ ಸಮರದ ಸೇನಾನಿಯಾಗಿ 5000ಕ್ಕೂ ಹೆಚ್ಚು ಜನ ಸ್ವಯಂಸೇವಕರನ್ನು ಸತ್ಯಾಗ್ರಹದ ರಣಕಣ ಕ್ಕಿಳಿಸಿದರು. ಭರತಖಂಡಕ್ಕೆ ಸ್ವಾತಂತ್ರ್ಯ ದೊರೆಯುತ್ತಲೆ ಮಹಾತ್ಮಾಜಿಯವರ ಕರೆಗೆ ಓಗೊಟ್ಟು, ಸಮಾಜ ಸೇವೆಗಾಗಿ ಹೊಳಲ್ಕೆರೆಯ ಸಮೀಪದ ಮಲ್ಲಾಡ ಹಳ್ಳಿಯಲ್ಲಿ ತಮ ಅನಾಥ ಸೇವಾಶ್ರಮವನ್ನು ಸ್ಥಾಪಿಸಿದರು. 1943ರಲ್ಲಿ ಸ್ಥಾಪಿತವಾದ ಈ ಆಶ್ರಮ ದೇಹ, ಬುದ್ಧಿ, ಆತ್ಮಗಳನ್ನು ಅರಳಿಸಬಲ್ಲ ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದಲ್ಲದೆ ಉಚಿತವಾದ ಒಂದು ವೈದ್ಯ ಶಾಲೆಯನ್ನೂ ನಡೆಸುತ್ತಿದೆ. ಶ್ರೀಯವರು ಸಾಹಿತ್ಯ ಸೃಷ್ಟಿಗೂ ಕೈಹಾಕಿ, ಸಾಹಿತ್ಯದ ಎಲ್ಲ ಮುಖಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ. 'ಕೊನೆಯ ಗುಟುಕು'. ಚಿತೆಯೋ ಸಮಾಧಿಯೋ', ಇವೇ ಮೊದಲಾದ ಹತ್ತು ಕಾದಂಬರಿಗಳನ್ನೂ, 'ದೇವರ ಉಪವಾಸ' ಎಂಬ ಕಥಾ ಸಂಕಲನವನ್ನೂ, ಹಲವು ಕವನ ಸಂಕಲನಗಳನ್ನೂ ಷಟ್ಕರ್ಮಸಿದ್ಧಿ, ಯೋಗಾಸನಗಳು - ಇವೇ ಮೊದಲಾದ ಪ್ರೌಢಶಾಸ್ತ್ರ ಗ್ರಂಥಗಳನ್ನೂ, 'ಗುರುದಕ್ಷಿಣೆ' ರಣಚಂಡಿ, ಮಹಾಶಿಲ್ಪಿ, ನ್ಯಾಯಮಂತ್ರಿ ಇತ್ಯಾದಿ ಹಲವು ನಾಟಕಗಳನ್ನೂ ಬರೆದಿದ್ದಾರೆ).

(''ನ್ಯಾಯವೇ ದೇವರು'' ಎಂಬ ನೀತಿಯಂತೆ, ರಾಜನಾಗಲಿ, ಭಿಕಾರಿಯಾಗಲಿ ಸಿರಿವಂತನಾಗಲಿ, ದರಿದ್ರನಾಗಲಿ; ಎಲ್ಲರೂ ನ್ಯಾಯಕ್ಕೆ ಮನ್ನಣೆಯನ್ನಿತ್ತು ತಲೆ ಬಾಗಲೇಬೇಕು. ನ್ಯಾಯಕ್ಕೆ ಹಿರಿಯರು ಕಿರಿಯರೆಂಬ ಭೇದಭಾವವಿಲ್ಲ ಸತ್ಯವೆಂಬ ಒರೆಗಲ್ಲಲ್ಲಿ ತೀಡಿ, ಅಪರಾಧಿ ಯಾರಾದರೂ ಸರಿಯೆ ಅವನನ್ನು ಶಿಕ್ಷಿಸುವುದೇ ಅದರ ಗುರಿ– ಈ ಅಂಶ ಪ್ರಕೃತ ದೃಶ್ಯಭಾಗದಲ್ಲಿ ಮನೋಹರವಾಗಿ ಒಡಮೂಡಿದೆ.)

(ಸ್ಥಳ - ಅಶೋಕನ ರಾಜಸಭೆ, ತುಂಬಿ ನೆರೆದ ಜನಸಂದಣಿ; ಮಂತ್ರಿಗಳು, ಸಾಮಂತರು, ದಂಡನಾಯಕರು, ಅಧಿಕಾರಿಗಳು, ಪೌರರು ಎಲ್ಲರೂ ಕಿಕ್ಕಿರಿದು ಸೇರಿದ್ದಾರೆ; ವಂದಿಮಾಗಧರು ಪರಾಕುಗಳನ್ನು ಹೇಳುತ್ತಿದ್ದಾರೆ; ಭಟ್ಟಂಗಿಗಳು ಹೊಗಳುತ್ತಿದ್ದಾರೆ.)

ಮಹಾ ರಾಜಾಧಿರಾಜ, ರಾಜ ಪರಮೇಶ್ವರ, ಕ್ಷತ್ರಿಯ ಕುಲತಿಲಕ, ದೇಶೋದ್ಧಾರಕ, ಧರ್ಮೋದ್ಧಾರಕ, ಮೌರ್ಯವಂಶಸಂಭೂತ, ಮಗಧ ದೇಶಾಧೀಶ್ವರ ಅಶೋಕ ಚಕ್ರವರ್ತಿ ಬಹು ಪರಾಕ್! ಬಹುಪರಾಕ್!!

ದೇವಾನಾಂಪ್ರಿಯ, ರಾಜಾನಾಂಪ್ರಿಯ, ಪ್ರಿಯದರ್ಶಿ ರಾಜಾ, ಸಮದರ್ಶೀ, ಪ್ರಜಾಸುಕ್ಷೇಮೀ, ರಾಜ್ಯಸುಕ್ಷೇಮೀ, ಸಾಮ್ರಾಟ ಅಶೋಕ ಮಹಾ ರಾಜಾಧಿರಾಜ ಬಹುಪರಾಕ್! ಬಹು ಪರಾಕ್!!

(ಸ್ವಲ್ಪಹೊತ್ತು ಗಂಭೀರವಾದ ಶಾಂತಿಯು ನೆಲೆಸುವುದು. ನೆರೆದ ಸಭಿಕರೆಲ್ಲರ ದೃಷ್ಟಿಯೂ ಏಕೀಕೃತವಾಗಿ ನ್ಯಾಯ ಮಂತ್ರಿಯಲ್ಲಿ ನೆಟ್ಟಿದೆ; ಶಿಶುಪಾಲ ಶರ್ಮನು ಗಂಭೀರವಾಗಿ ಕುಳಿತಿದ್ದಾನೆ. ಆಗ ಅಶೋಕ ಚಕ್ರವರ್ತಿಯು ಮಹಾ ಠೀವಿಯಿಂದ ನ್ಯಾಯ ಮಂತ್ರಿಯ ಕಡೆಗೆ ತಿರುಗಿ)

ಅಶೋಕ:- ನ್ಯಾಯಮಂತ್ರಿಗಳೇ! ಕೊಲೆಯ ಶೋಧವಾಯ್ತೇ!

ಶಿಶುಪಾಲಶರ್ಮ :- (ಅದೇ ಗಂಭೀರತೆಯಿಂದ) ಮಗಧೇಶನ ಅಪ್ಪಣೆಯಂತೆ.

ಅಶೋಕ :- ಅಪರಾಧಿಯು ಸಿಕ್ಕಿದನೇ?



Downloaded from https:// www.studiestoday.com

Downloaded from https:// www.studiestoday.com

ಶಿಶುಪಾಲಶರ್ಮ :– ಅಹುದು ಚಕ್ರೇಶ್ವರಾ.

ಅಶೋಕ :– ಅತನನ್ನು ಸಭೆಯಲ್ಲಿ ತಂದು ನಿಲ್ಲಿಸಬಲ್ಲಿರಾ?

ಶಿಶುಪಾಲಶರ್ಮ :– ಪ್ರಭುವಿನಾಜ್ಞೆಯಾದರೆ ಆಗಬಹುದು.

ಅಶೋಕ :– ಹಾಗಾದರೆ ಸನ್ನಿಧಿಯಲ್ಲಿ ತಂದು ನಿಲ್ಲಿಸಿ.

(ಶಿಶುಪಾಲಶರ್ಮನು ಸ್ವಲ್ಪಹೊತ್ತು ಯೋಚಿಸುತ್ತಿರುವನು; ಅವನ ಹೃದಯದಲ್ಲಿ ಒಮ್ಮೆಗೆ ತುಮುಲ ಯುದ್ಧವು ಪ್ರಾರಂಭವಾಗುವುದು. ಎಲ್ಲರೂ ಆತನನ್ನು ದೃಷ್ಟಿಸಿ ನೋಡುತ್ತಿರುವರು. ಮೌನವನ್ನೊಡೆದು ಅಶೋಕನು ಮತ್ತೆ ಹೂಂಕರಿಸುತ್ತ)

ಅಶೋಕ:– ಹೂಂ! ತಡವೇಕೆ ಮತ್ತೆ?

ಶಿಶುಪಾಲಶರ್ಮ :– (ಧೈರ್ಯದಿಂದ ನಿಂತು) ಧನವೀರಾ!

(ಎಲ್ಲೆಲ್ಲಿಯೂ ನಿಶ್ಶಬ್ದ)

ಧನವೀರ :– (ಶೀಘ್ರದಿಂದ ಪ್ರವೇಶಿಸಿ ನಮಸ್ಕರಿಸಿ) ಪ್ರಭೋ!

ಶಿಶುಪಾಲಶರ್ಮ:– ಅಶೋಕನನ್ನು ಸೆರೆಹಿಡಿ; ನ್ಯಾಯಮಂತ್ರಿಯು ಆಜ್ಞಾಪಿಸುತ್ತಿದ್ದಾನೆ: ಆತನ ಕಟ್ಟಾಜ್ಞೆಯಿದು.

ಧನವೀರ:– ಅಪ್ಪಣೆ ಮಂತ್ರೀಶ್ವರಾ!

(ಶಿರಬಾಗಿ ಎದ್ದು ಚಕ್ರವರ್ತಿಯ ಕಡೆ ಗಂಭೀರವಾಗಿ ನೋಡುವನು. ಆ ನೋಟದಲ್ಲಿ ''ನೀನೇ ಆ ರತ್ನಸಿಂಹಾಸನದಿಂದ ಇಳಿದುಬಂದು ನನ್ನ ಸ್ವಾಧೀನವಾಗುವೆಯಾ ಅಥವಾ ನಾನು ನನ್ನ ಅಧಿಕಾರವನ್ನು ಉಪಯೋಗಿಸಲೇ?'' ಎಂಬ ಪ್ರಶ್ನೆ ಇದ್ದಂತಿರುವುದು. ಸಭೆಯಲ್ಲಿ ಎಲ್ಲೆಲ್ಲಿಯೂ ಗುಜುಗುಜು ಧ್ವನಿಯು ಪ್ರಾರಂಭವಾಗುವುದು. ಶಿಶುಪಾಲ ಶರ್ಮನು ಗಂಭೀರವಾಗಿ ಕೈಸನ್ನೆಯಿಂದ ಸುಮ್ಮನಿರುವಂತೆ ಸಂಜ್ಞೆ ಮಾಡುವನು).

ಅಶೋಕ:– (ಕ್ರೋಧಾವೇಶದಿಂದ) ಹುಂ – ಮದಾಂಧಾ! ಇಷ್ಟು ದೂರ ಬಂದೆಯಾ? ಮಗಧ ಸಾಮ್ರಾಟನನ್ನು ಸೆರೆ ಹಿಡಿಯುವಷ್ಟು ಉದ್ಧಟತನವೇ ನಿನಗೆ?

ಶಿಶುಪಾಲಶರ್ಮ :– ಸಾಮ್ರಾಟನು ಅಪರಾಧಿಯಲ್ಲ, ಅಶೋಕನು ಹಂತಕ. ಆದುದರಿಂದಲೇ ಈ ಕಟ್ಟಾಜ್ಞೆ. ಧನವೀರಾ! ಹಿಡಿ ಅಶೋಕನನ್ನು ಸೆರೆಯಲ್ಲಿ; ಆತನನ್ನು ತಂದು ನ್ಯಾಯಾಸ್ಥಾನದ ಮುಂದೆ ನಿಲ್ಲಿಸು.

(ಧನವೀರನು ಸೆರೆ ಹಿಡಿಯಲು ಮುಂದಾಗುವಷ್ಟರಲ್ಲಿ ಅಶೋಕನು ಸಿಂಹಾಸನದಿಂದ ಇಳಿದು ಬಂದು ಧನವೀರನ ಪಕ್ಕದಲ್ಲಿ ತಲೆತಗ್ಗಿಸಿ ನಿಲ್ಲುವನು. ಸಭೆಯಲ್ಲಿ ಎಲ್ಲೆಲ್ಲಿಯೂ ಕೋಲಾಹಲ)

ಶಿಶುಪಾಲಶರ್ಮ: (ಗಂಭೀರವಾಗಿ) ಹಾಂ – ಶಾಂತಿ ಶಾಂತಿ! ನಾನೀಗ ನ್ಯಾಯ ಮಂತ್ರಿಯ ಪದದಿಂದ ಆಜ್ಞಾಪಿಸುತ್ತಿದ್ದೇನೆ. ಎಲ್ಲರೂ ವಿವೇಕದಿಂದ ವರ್ತಿಸಿ, ಶಾಂತತೆಯಿಂದ ಕುಳಿತುಕೊಳ್ಳಬೇಕು; ಇಲ್ಲವಾದರೆ ಅನರ್ಥವಾದೀತು. ಅನುಚಿತ ಪ್ರವರ್ತನೆಗೆ ಶಾಸನದ ಉಲ್ಲಂಘನೆಯ ಕ್ರಮದಂತೆ ಸೆರೆಯ ಅನುಜ್ಞೆಯನ್ನು ಮಾಡಬೇಕಾದೀತು; ಎಚ್ಚರಿಕೆ.

(ಅಶೋಕನು ಕೈಸನ್ನೆಯಿಂದ ಎಲ್ಲರಿಗೂ ಕುಳಿತುಕೊಳ್ಳುವಂತೆ ಆಜ್ಞಾಪಿಸುವನು; ಮತ್ತೆ ಸಭೆಯಲ್ಲಿ ಮೌನವಾವರಿಸುವುದು.

ಶಿಶುಪಾಲಶರ್ಮ:– (ನ್ಯಾಯಸ್ಥಾನದಲ್ಲಿ ನಿಂತು ಮನಸ್ಸಿನಿಂದಲೇ ಚಕ್ರೇಶ್ವರನಿಗೆ ವಂದಿಸಿ) ಅಶೋಕಾ! ನೀನು ಅಪರಾಧಿ, ನಿನ್ನ ಮೇಲೆ ರಕ್ಷಕಭಟನ ಕೊಲೆಯ ಆರೋಪವು ಬಂದಿದೆ. ಈ ವಿಷಯದಲ್ಲಿ ನೀನು ಏನನ್ನಾದರೂ ಹೇಳುವುದಿದ್ದರೆ ಹೇಳಬಹುದು.

ಅಶೋಕ:– (ನಿರುತ್ತರ)



Downloaded from https:// www.studiestoday.com

Downloaded from https:// www.studiestoday.com

ಶಿಶುಪಾಲಶರ್ಮ– ನಿನ್ನ ನಿರುತ್ತರವು ಅಪರಾಧವನ್ನು ಒಪ್ಪಿಕೊಂಡಂತೆ ಎಂದು ಭಾವಿಸಲೇ? ಆ ವಿಷಯದಲ್ಲಿ ಹೇಳುವುದಿದ್ದರೆ ಇನ್ನೂ ಅವಕಾಶವಿದೆ.

ಅಶೋಕ:– ನಗರ ರಕ್ಷಕನನ್ನು ನಾನು ಕೊಲ್ಲಲೇಬೇಕಾಗಿ ಬಂದುದರಿಂದ ಕೊಂದೆನು; ಅನ್ಯಾಯವಾಗಿ ನಾನಾತನನ್ನು ಕೊಲ್ಲಲಿಲ್ಲ.

ಶಿಶುಪಾಲಶರ್ಮ :– ನಗರ ರಕ್ಷಣೆಯ ಹೊಣೆಯು ಆತನದು; ಆತನು ತನ್ನ ಕರ್ತವ್ಯ ಪಾಲನೆಯಲ್ಲಿ ಎಂದೂ ಹಿಂದೆ ಸರಿಯುವಂತಹನಲ್ಲ ಅದನ್ನು ನಾನೂ ಬಲ್ಲೆ.

ಅಶೋಕ:– ಆದರೂ ಆತನು ದಂಡನೆಗೆ ಅರ್ಹನು. ಆದುದರಿಂದಲೇ ನಾನವನನ್ನು ಕೊಂದೆನು.

ಶಿಶುಪಾಲಶರ್ಮ :– ಅಶೋಕಾ! ನೀನು ಹೇಳುವುದು ಅಸತ್ಯ, ಅಕ್ಷಮ್ಯ. ಈ ಕೊಲೆಯ ದಂಡನೆಗೆ ಶಾಸನದಲ್ಲಿ ಮರಣದಂಡನೆಯ ಶಿಕ್ಷೆಯನ್ನು ಹೇಳಿದೆ, ತಿಳಿದಿದೆಯೇ?

(ಸಭೆಯಲ್ಲಿ ಮತ್ತೆ ಕೋಲಾಹಲ)

ಶಿಶುಪಾಲಶರ್ಮ:–(ಗಂಭೀರವಾಗಿ) ಹಿಂದೊಂದುಬಾರಿ ನಾನು ಜ್ಞಾಪಿಸಿದ್ದೇನೆ; ನಾನೀಗ ಶಿಶುಪಾಲಶರ್ಮನಲ್ಲ, ನ್ಯಾಯಮಂತ್ರಿ ಎಂದು ಇದೋ ನೋಡಿರಿ. ಚಕ್ರವರ್ತಿಯು ದಯಪಾಲಿಸಿರುವ ನ್ಯಾಯಮುದ್ರಿಕೆಯು ನನ್ನಲ್ಲಿದೆ. ಹೀಗಿರುವುದರಿಂದ ನ್ಯಾಯಾನ್ಯಯ ವಿಚಕ್ಷಣೆಯು ನನ್ನ ಪರಮ ಕರ್ತವ್ಯ; ಆದುದರಿಂದ ಎಚ್ಚರಿಕೆ! ಅನರ್ಥಕ್ಕೆ ಅವಕಾಶವೀಯಬೇಡಿರಿ.

(ಅಶೋಕನು ಮತ್ತೊಮ್ಮೆ ಸಭೆಯನ್ನುದ್ದೇಶಿಸಿ ಸುಮ್ಮನಿರುವಂತೆ ಸಂಜ್ಞೆ ಮಾಡುವನು)

ಶಿಶುಪಾಲಶರ್ಮ:– ಅಪರಾಧಿ! ನೀನೊಬ್ಬ ರಕ್ಷಕಭಟನ ಕೊಲೆ ಮಾಡಿರುವಿ; ಆದುದರಿಂದ ನ್ಯಾಯ ಶಾಸನದಂತೆ ನಿನಗೆ ಮರಣದಂಡನೆಯನ್ನು ವಿಧಿಸಿರುತ್ತೇನೆ.

ಅಶೋಕ:– (ಮನಸ್ಸಿನಲ್ಲಿಯೇ ನಗುತ್ತಾ) (ಸ್ವ) ಇದೆಂತಹ ನ್ಯಾಯ ಪರಿಶೀಲನೆ! ಸತ್ಯನಿಷ್ಠೆ! ನಿಜವಾಗಿಯೂ ನ್ಯಾಯಮಂತ್ರಿಯು ಮಹಾಪುರುಷನು, ದೇವಾಂಶ ಸಂಭೂತನು; ಇಂತಹರು ರಾಜ್ಯಾಡಳಿತದಲ್ಲಿರುವುದೇ ನನಗೊಂದು ಹೆಮ್ಮೆ (ಪ್ರ) ನ್ಯಾಯಮಂತ್ರೀ! ನಾನು ನಿನ್ನೀ ನಿಷ್ಪಕ್ಷಪಾತವಾದ ನಿರ್ಣಯಕ್ಕೆ ಎದುರಾಗಿ ಏನನ್ನೂ ಹೇಳಲಾರೆ.

ಶಿಶುಪಾಲಶರ್ಮ:– ಸಂತೋಷ (ಎದ್ದುನಿಂತು) ಮಹಾಜನರೇ! ಈಗ ಎಲ್ಲರೂ ಶಾಂತಚಿತ್ತದಿಂದ ಲಾಲಿಸಬೇಕು. ನ್ಯಾಯಮಂತ್ರಿ ಪದದ ಕರ್ತವ್ಯವು ನ್ಯಾಯಾನ್ಯಾಯ ವಿಚಕ್ಷಣೆಯು. ಹಾಗೆಯೇ ಅಪರಾಧಿಯ ಕರ್ತವ್ಯವು ಶಾಸನಬದ್ಧವಾದ ಶಿಕ್ಷೆಯನ್ನು ಅನುಭವಿಸುವುದು. ಆದರೆ ಧರ್ಮ ಶಾಸ್ತ್ರಗಳು, ನಮ್ಮ ಪುರಾಣ ಗ್ರಂಥಗಳು ರಾಜನು ಪ್ರತ್ಯಕ್ಷ ಈಶ್ವರ ಸ್ವರೂಪನೆಂದು ಹೇಳಿವೆ. ಅದನ್ನು ನಾನೂ ಸನ್ಮಾನಿಸುತ್ತೇನೆ. ನೀವೆಲ್ಲರೂ ಅನುಮೋದಿಸುತ್ತೀರಿ. ಹೀಗಿರುವಲ್ಲಿ, ಈಶ್ವರ ಸ್ವರೂಪನಾದ ಆತನನ್ನು ಶಿಕ್ಷಿಸುವುದಕ್ಕೆ ಈಶ್ವರನೊಬ್ಬನಿಗೆ ಸಾಧ್ಯವೇ ಹೊರತು ನನ್ನಂತಹ ನ್ಯಾಯಮಂತ್ರಿಯ ಅಧಿಕಾರಕ್ಕೆ ಮೀರಿದ ಕಾರ್ಯವದು. ಆದುದರಿಂದ ನ್ಯಾಯಕ್ಕೆ ಹಾನಿಯಾಗದಂತೆ, ಈಶ್ವರೀಕ್ರೋಧಕ್ಕೆ ಗುರಿ ಯಾಗದಂತೆ ಚಕ್ರವರ್ತಿಯ ಈ ಸುವರ್ಣದ ವಿಗ್ರಹವನ್ನು ಪ್ರಜೆಗಳೆಲ್ಲರ ಮುಂದೆಯೇ ಗಲ್ಲುಗಂಭಕ್ಕೆ ತೂಗು ಹಾಕಬೇಕೆಂಬುದಾಗಿ ನಾನು ಆಜ್ಞಾಪಿಸುತ್ತೇನೆ. (ಗುಪ್ತಚಾರನು ತಂದ ಸುವರ್ಣ ವಿಗ್ರಹವನ್ನು ಎಲ್ಲರೂ ನೋಡುವರು) ಹೂಂ, ಒಯ್ಯಿರಿ ಅದನ್ನು ಆಚೆಗೆ; ಕೂಡಲೇ ಆಜ್ಞೆಯು ಪರಿಪಾಲಿಸಲ್ಪಡಲಿ (ಒಯ್ಯುವರು)

ಸಭೆಯಲ್ಲಿ :– (ಕೋಲಾಹಲ) ನ್ಯಾಯವಾದ ಆಜ್ಞೆ! ಮಂತ್ರಿಯು ನಿಷ್ಪಕ್ಷಪಾತಿಯು, ದಕ್ಷನು. ಭಲಾ! ಭಲಾ!! ನ್ಯಾಯಮಂತ್ರಿಗೆ ಜಯವಾಗಲಿ!

ಅಶೋಕ :– (ತಟ್ಟನೆ ಮುಂದುವರಿದು ನ್ಯಾಯಮಂತ್ರಿಯನ್ನು ತಬ್ಬಿಕೊಂಡು) ನ್ಯಾಯ ಮಂತ್ರಿಗಳೇ! ನಿಮ್ಮ ಕರ್ತವ್ಯ



Downloaded from https:// www.studiestoday.com

Downloaded from https:// www.studiestoday.com

ದಕ್ಷತೆಯ ನಿಷ್ಪಕ್ಷಪಾತವಾದ ನ್ಯಾಯ ವಿಚಕ್ಷಣೆಯನ್ನು ನೋಡಿ ನನ್ನ ಕಣ್ಣುಗಳಿಂದು ತೆರೆದುವು; ನ್ಯಾಯವೆಂದರೆ ಏನೆಂದು ಇಂದು ನಾನು ತಮ್ಮಿಂದ ತಿಳಿದುಕೊಂಡೆ ನಿಮ್ಮ ಸಾಮರ್ಥ್ಯವನ್ನೂ, ಧೈರ್ಯ ಸ್ಥೈರ್ಯವನ್ನೂ ನೋಡಿ ನಾನು ಕೃತಾರ್ಥನಾದೆನು. ಇದನ್ನೆಂದಿಗೂ ನಾನು ಮರೆಯುವಂತಿಲ್ಲ, ನನ್ನೀ ವಿಶಾಲವಾದ ಮಗಧ ಸಾಮ್ರಾಜ್ಯದಲ್ಲಿ ನ್ಯಾಯಮಂತ್ರಿಯಾಗಿರಲು ತಮ್ಮ ಹೊರತು ಇನ್ಯಾರಿಗೂ ಯೋಗ್ಯತೆ ಸಾಲದು; ಆದುದರಿಂದ ಆ ಭಾರವನ್ನು ಎಂದೆಂದೂ ತಾವೇ ವಹಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ; ನೆರವೇರಿಸಿಕೊಡುವಿರಾ?

ಶಿಶುಪಾಲಶರ್ಮ:– ಮಧ್ಯೆಯೊಂದು ಮಾತಿದೆ ಚಕ್ರೇಶ್ವರಾ! ಈ ನಮ್ಮೆಲ್ಲರ ಸಂತೋಷಕ್ಕೂ ಆನಂದಕ್ಕೂ ಕಾರಣಳಾದವಳು ಈ ನನ್ನ ಸಾಕುಮಗಳಾದ ನಿನ್ನ ರಾಜನರ್ತಕಿಯು; (ಮಮತೆಯು ಬರುವಳು) ಇವಳು ಸೂಳೆಯಲ್ಲ, ಕಲೋಪಾಸಕಿಯು; ಇವಳನ್ನು ಮಮತೆಯಿಂದ ನೋಡುವೆಯಾ?

ಅಶೋಕ : ಸಚಿವ ಶ್ರೇಷ್ಠರೇ! ಮಮತೆಯು ಇಂದಿನಿಂದ ರಾಜನರ್ತಕಿಯಲ್ಲ, ನನ್ನ ಹೃದಯ ನರ್ತಕಿಯು; ನಾನಿವಳನ್ನು ಪ್ರೇಮದಿಂದ ಸ್ವೀಕರಿಸುತ್ತೇನೆ. ಅಪ್ಪಣೆ ಕೊಡಿಸುವಿರಾ? ಸಂತೋಷವೇ? (ಮಮತೆಯ ಕೈ ಹಿಡಿದು ಸೆಳೆದುಕೊಳ್ಳುವನು. ಅವಳು ಹೃದಯಾಂತರಾಳದಿಂದ ಎಲ್ಲರಿಗೂ ಶಿರಬಾಗಿ ನಮಿಸುವಳು)

ಶಿಶುಪಾಲಶರ್ಮ:– ಎಲ್ಲರೂ ಈ ಸಂತೋಷ ಸಮಯದಲ್ಲಿ ಮಂಗಲದಾಯಕನಾದ ಪರಮಾತ್ಮನನ್ನು ಸ್ತುತಿಸೋಣ.

ರಾಗ ಮಾಲಕಂಸ್ – ಝುಂಪೆ ತಾಳ

ಪ್ರೇಮಖನಿ ಜ್ಞಾನ ಘನ ಯೋಗಿವರ ಕರುಣಿಸೋ ।


ಮೋಹ ಮದಗಳ ಅಳಿಸೂ ಶಾಂತಿ ಜಗದಲಿ ನಲಿಸೊ ।। ಧೃ ।।

ಲೋಕೇಶ ಗೌರೀಶ ನರ್ತಿಸಲಿ ಜಿಹ್ವೆಯಲಿ ।

ಅನವರತ ವರನಾಮ ಕೈವಲ್ಯಧಾಮ ।। 1 ।।

– ಮಂಗಳ –

(ತೆರೆ)





Downloaded from https:// www.studiestoday.com


Downloaded from https:// www.studiestoday.com

## ಶಬ್ದಗಳ ಅರ್ಥ


ನೆರೆದ - ಸೇರಿದ; ಹಂತಕ - ಕೊಲೆಗಾರ; ವಿಚಕ್ಷಣೆ - ಕಾರ್ಯಕುಶಲತೆಯುಳ್ಳವಳು

## ಅಭ್ಯಾಸ


**ಕೃತಿ 1) I. ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**




**II. ಅಶೋಕನನ್ನು ಉದ್ದೇಶಿಸಿ ಹೇಳಿದ ಬಹುಪರಾಕಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ.**




**III. ಸಭಾಶಾಂತತೆಯನ್ನು ಉದ್ದೇಶಿಸಿ ಹೇಳಿದ ಶಿಶುಪಾಲಶರ್ಮನ ನುಡಿಗಳನ್ನು ಚೌಕಟ್ಟಿನಲ್ಲಿ ಬರೆಯಿರಿ.**




**ಕೃತಿ 2) ಕೆಳಗಿನ ಪ್ರತಿಯೊಂದು ಪದದ ಅರ್ಥ ಕೊಡುವ ಒಂದು ಶಬ್ದವನ್ನು ಪದಬಂಧದಿಂದ ಹುಡುಕಿ ಬರೆಯಿರಿ.**

1) ಧ್ವಜದ ಚಕ್ರ ಈ ರಾಜನ ಹೆಸರಲ್ಲಿದೆ- ಅಶೋಕ
2) ಅರಿಷಡವರ್ಗದಲ್ಲಿ ಒಂದು
3) ರಾಜ ಕುಳಿತುಕೊಳ್ಳುವ ಆಸನ
4) ತಪ್ಪಿತಸ್ಥ



Downloaded from https:// www.studiestoday.com

Downloaded from https:// www.studiestoday.com

5) ಹೊಗಳುಭಟ್ಟರು

6) ಸಮದೃಷ್ಟಿ

7) ದಿವಾನ

8) ಕಸವರ

ಉದಾಹರಣೆಯಲ್ಲಿ ತೋರಿಸದಂತೆ ಕೆಳಗಿನವುಗಳಿಗೆ ಯೋಗ್ಯ ಶಬ್ದವನ್ನು ಕೋಷ್ಟಕದಲ್ಲಿ ಗುರುತಿಸಿರಿ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಚ | ಗ | ರ | ತ | ದ | ಸ | ಪ | ಟ | ಜ | | ಗು | ರೂ | ಅ | | |
| ಶ್ರೂ | ವಂ | ಧಿ | ಮಾ | ಗ | ಧ | ರು | ಪೈ | ಝು | ಯ | ಕ | ಒ | ಪ | | ಲ |
| ತೇ | ರಂ | ಹೇ | ಛ | ರ್ಝ | ಠ | ಳ | ಮೀ | ದೇ | ನಿ | ಣಾ | ರ | ರಾ | ಆಃ | |
| ತ್ರಿ | ಜೆ | ಗೆ | ಶ | ತಂ | ಜ | ಛೀ | ಸಂ | ಷ್ಟ | ಕೈ | ಖ | ಟೈ | ಏ | ಡು | ಣ |
| ಮಂ | ರೆ | ಥ | ವೀ | ಇ | ಪೇ | ನೈ | ಕ್ಷ | ಜೂ | ಸಾ | ಳೀ | ಕ್ಕ | ಮ | ರಂ | ರಿ |
| ಚಾ | ಯ | ಪೂ | ನ | ಜ | ರ್ನಾ | ಪಾ | ಚಿ | ಸೀ | ಮು | ಡ | ಷ | ಶಿ | ಚ | ದಿ |
| ಎ | ಲೀ | ಸ | ಗೇ | ಶಿ | ತ | ಫ | ಸೇ | ರ್ಣ | ದ | ಛ | ಅ | ಶೋ | ಕ | ನೈ |
| ಹಾ | ಹಾ | ರೇ | ಸ | ಬೂ | ಅ | ಹ | ಪಾ | ವ | ತ | ಗೇ | ನು | ಫ | ಐ | ಜೇ |
| ಸಿಂ | ಷ್ಠಿ | ಮೇ | ಟೇ | ಢ | ಚೊ | ಟೇ | ಹು | ಸು | ಚು | ವೈ | ಕೇ | ಬ | ಮ | ದ |

ಕೃತಿ 3) I. ಕೊಲೆಯ ವಿಚಾರದಲ್ಲಿ ನ್ಯಾಯ ಮಂತ್ರಿಯು ಹೇಳಿದ ತೀರ್ಮಾನವೇನು ಹೇಳಿರಿ.

II. ನಿಮ್ಮೂರಿನಲ್ಲಿ ನಡೆದ ಯಾವುದಾದರೊಂದ ನ್ಯಾಯ ಸಮ್ಮತವಾದ ತೀರ್ಮಾನವನ್ನು ಬರೆಯಿರಿ

ಕೃತಿ 4) I. ರಾಜನಿಗೆ ಮನ್ನಣೆಕೊಡುವ ನ್ಯಾಯಮಂತ್ರಿಯ ಧರ್ಮಸೂಕ್ಷ್ಮವನ್ನು ನಿನ್ನ ಮಾತುಗಳಲ್ಲಿ ಬಣ್ಣಿಸಿರಿ.

II. ಈ ಗದ್ಯಪಾಠದಿಂದ ನೀವು ತಿಳಿದುಕೊಳ್ಳುವ ಮೌಲ್ಯಗಳನ್ನು ನಾಲ್ಕೈದು ವಾಕ್ಯಗಳಲ್ಲಿ ವಿವರಿಸಿರಿ.

ಕೃತಿ 5) I. ಕೆಳಗಿನ ಶಬ್ದಗಳ ಅರ್ಥಹೇಳಿ ವಾಕ್ಯದಲ್ಲಿ ಉಪಯೋಗಿಸಿರಿ.
ಕೃತಾರ್ಥ, ಉಲ್ಲಂಘನೆ, ಕೈವಲ್ಯ, ಅನವರತ

II. ಕೆಳಗಿನ ಷಟ್ಕೋನದಿಂದ ಆಯ್ದು ಮೂರು ಅಕ್ಷರಗಳಿಂದ ಕೂಡಿದ ನಾಲ್ಕು ಅರ್ಥಪೂರ್ಣ ಶಬ್ದ ಬರೆಯಿರಿ.

ಚ, ಗ,
ಕು, ಭ, ಸಾ, ಣ,
ಪ, ಸ, ನೆ,
ಹ, ಮ, ಧ,
ರ, ಧು

***

94UEMP



Downloaded from https:// www.studiestoday.com

Downloaded from https:// www.studiestoday.com






Downloaded from https:// www.studiestoday.com

Downloaded from https:// www.studiestoday.com

## ವ್ಯಾಕರಣ

### ಸರ್ವನಾಮಗಳು

ನಾಮಪದದ ಬದಲಾಗಿ ಬಳಿಸುವ ಪದಗಳಿಗೆ ಸರ್ವನಾಮಗಳೆಂದು ಕರೆಯುವರು.

ಉದಾ- ನಾನು, ನೀನು, ಅವನು, ಅವಳು, ಅದು, ಇದು, ತಾನು, ತಾವು, ಇತ ಸರ್ವನಾಮಗಳಲ್ಲಿ ಮೂರು ವಿಧಗಳು.

1) ಪುರುಷಾರ್ಥಕ ಸರ್ವನಾಮ
2) ಪ್ರಶ್ನಾರ್ಥಕ ಸರ್ವನಾಮ
3) ಆತ್ಮಾರ್ಥಕ ಸರ್ವನಾಮ

1) **ಪುರುಷಾರ್ಥಕ ಸರ್ವನಾಮ:-** ನಾನು, ನಾವು, ನೀನು, ನೀವು, ಇವನು, ಇವಳು, ಇದು, ಇವು, ಅವನು, ಅವಳು, ಅದು, ಇತ್ಯಾದಿ.

2) **ಪ್ರಶ್ನಾರ್ಥಕ ಸರ್ವನಾಮ:-** ಯಾರು, ಯಾವುದು, ಏನು, ಏತರದು, ಯಾವನು, ಯಾವಳು ಇತ್ಯಾದಿ.

3) **ಆತ್ಮಾರ್ಥಕ ಸರ್ವನಾಮ:-** ತಾವು, ತಾನು, ತನ್ನ ಮೊದಲಾದವುಗಳು

### ವಿಶೇಷಣ

ಯಾವುದಾದರೊಂದು ವಸ್ತು, ವ್ಯಕ್ತಿ ಮೊದಲಾದವುಗಳು ಗುಣ, ಬಣ್ಣಗಾತ್ರ ಇತ್ಯಾದಿಗಳನ್ನು ಹೇಳುವ ಪದಗಳಿಗೆ ವಿಶೇಷಣಗಳು ಎಂದು ಕರೆಯುತ್ತಾರೆ.

ಇದರಲ್ಲಿ **ಗುಣವಾಚಕ, ಪರಿಮಾಣವಾಚಕ** ಹಾಗೂ **ಸಂಖ್ಯಾವಾಚಕ** ವಿಶೇಷಣಗಳೆಂದು 3 ಪ್ರಕಾರಗಳುಂಟು.

1) **ಗುಣವಾಚಕ:-** ಯಾವುದೇ ಒಂದು ವಸ್ತು ಅಥವಾ ವ್ಯಕ್ತಿಯ ಗುಣ ಸೂಚಿಸುವುದಕ್ಕೆ ಗುಣವಾಚಕ ಎನ್ನುವರು.

ಉದಾ: ಸುಂದರವಾದ ಕಟ್ಟಡ
ಒಳ್ಳೆಯ ಸ್ನೇಹಿತ
ಇಂಪಾದ ಸ್ವರ
ತಂಪಾದ ಗಾಳಿ

2) **ಪರಿಮಾಣವಾಚಕ:-** ಯಾವುದೇ ಒಂದು ವಸ್ತುವಿನ ಅಥವಾ ವಕ್ತಿಯ ಪ್ರಮಾಣವನ್ನು ಸೂಚಿಸುವುದಕ್ಕೆ ಪರಿಮಾಣವಾಚಕ ಎನ್ನುವರು

ಉದಾ.: ಚಿಕ್ಕ ಮಗು
ದೊಡ್ಡ ಶಾಲೆ
ಕಿರಿಯ ಮಗಳು



Downloaded from https:// www.studiestoday.com

Downloaded from https:// www.studiestoday.com

3) **ಸಂಖ್ಯಾವಾಚಕ:-** ವ್ಯಕ್ತಿ ಅಥವಾ ವಸ್ತುವಿನ ಸಂಖ್ಯೆಯನ್ನು ಸೂಚಿಸುವುದೇ ಸಂಖ್ಯಾವಾಚಕ ವಿಶೇಷಣವಾಗಿದೆ.

ಉದಾ.: ಹತ್ತು ಕೈಗಳು
ಒಂದು ತಲೆ
ಇಪ್ಪತ್ತು ಆಕಳುಗಳು
ನಾಲ್ಕು ಕರುಗಳು

## ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಅಥವಾ ಉಂಟುಮಾಡುವ ಪ್ರತ್ಯಯಗಳಿಗೆ 'ವಿಭಕ್ತಿ ಪ್ರತ್ಯಯ' ಎಂದು ಹೆಸರು ವಿಭಕ್ತಿ ಪ್ರತ್ಯಯಗಳಲ್ಲಿ ಒಟ್ಟು 8 ಪ್ರಕಾರಗಳಿದ್ದು ಅವುಗಳ ಪ್ರತ್ಯಯ ಹಾಗೂ ಉದಾಹರಣೆಗಳು ಈ ಕೆಳಗಿನಂತಿವೆ.

| ವಿಭಕ್ತಿ | ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ | ಉ | ರಾಮನು |
| ದ್ವಿತೀಯ | ಅನ್ನು | ರಾಮನನ್ನು |
| ತೃತೀಯಾ | ಇಂದ | ರಾಮನಿಂದ |
| ಚತುರ್ಥಿ | ಗೆ, ಇಗೆ, ಅಕ್ಕೆ | ರಾಮನಿಗೆ |
| ಪಂಚಮಿ | ದೆಸೆಯಿಂದ | ರಾಮನಿಂದ |
| ಷಷ್ಠೀ | ಅ | ರಾಮನ |
| ಸಪ್ತಮಿ | ಅಲ್ಲ | ರಾಮನಲ್ಲಿ |
| ಸಂಬೋಧನೆ | ಏ, ಇರು | ರಾಮನೇ |

## ವಾಕ್ಯ ಪ್ರಕಾರಗಳು

ವಾಕ್ಯರಚನಾ ವಿವರ: ಕ್ರಮವತ್ತದ ಪದಗಳ ಮತ್ತು ಪೂರ್ಣ ಅರ್ಥಕೊಡುವ ಸಂಯೋಜಿತ ರಚನೆಯೇ ವಾಕ್ಯ, ನಿಖರ, ಸ್ಪಷ್ಟ ಹಾಗೂ ಪೂರ್ಣ ಅರ್ಥಕೊಡುವ ವ್ಯಾಕರಣದ ರಚನೆಯಿದು.

ಉದಾ: 1) ವಿಜಯನು ಊರಿಗೆ ಹೋದನು
2) ಗಂಗೆಯು ನೀರನ್ನು ತಂದಳು

## ವಾಕ್ಯ ಪ್ರಕಾರಗಳು:

ವಾಕ್ಯಗಳಲ್ಲಿ **ಸರಳ ವಾಕ್ಯ**, **ಸಂಯುಕ್ತ ವಾಕ್ಯ** ಹಾಗೂ **ಸಂಕೀರ್ಣ** (ಮಿಶ್ರ) ವಾಕ್ಯ ಎಂದು ವಿಂಗಡಿಸಲಾಗಿದೆ.

**ಸರಳ ವಾಕ್ಯ:** ಒಂದು ಕ್ರಿಯಾ ಪದದೊಡನೆ ಸ್ವತಂತ್ರವಾದ, ಖಚಿತ ಅರ್ಥಕೊಡುವ ವಾಕ್ಯರಚನೆಗೆ ಸರಳ ವಾಕ್ಯವೆನ್ನುವರು.

ಉದಾ: 1) ಅಜ್ಜಿಯು ಕಥೆಯನ್ನು ಹೇಳುತ್ತಾಳೆ

2) ಬೆಕ್ಕು ಹಾಲನ್ನು ಕುಡಿಯುತ್ತದೆ



Downloaded from https:// www.studiestoday.com

Downloaded from https:// www.studiestoday.com

**ಸಂಯುಕ್ತ ವಾಕ್ಯ:** ಎರಡು ಅಥವಾ ಅನೇಕ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣ ಅರ್ಥವನ್ನು ನೀಡುವುದಕ್ಕೆ ಸಂಯುಕ್ತ ವಾಕ್ಯ ಎನ್ನುವರು ಇದರಲ್ಲಿ ಎರಡು ಪೂರ್ಣ ಕ್ರಿಯಾಪದಗಳಿರುತ್ತವೆ.

ಉದಾ: 1) ನಾವು ಸಾಕಷ್ಟು ಹಣ ತೆಗೆದುಕೊಂಡು ಹೋಗಿರುವುದರಿಂದ ಆ ವಸ್ತುವನ್ನು ಖರೀದಿಸಲಿಕ್ಕಾಗಲಿಲ್ಲ
2) ಅವನು ಚೆನ್ನಾಗಿ ಆಟ ಆಡಲಿಲ್ಲ, ಆದರೂ ಪಂದ್ಯವನ್ನು ಗೆದ್ದನು.

**ಸಂಕೀರ್ಣ (ಮಿಶ್ರ) ವಾಕ್ಯ:** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಆಧೀನವಾಗಿರುವುದಕ್ಕೆ ಸಂಕೀರ್ಣ ವಾಕ್ಯವೆನ್ನುತ್ತಾರೆ. ಇದರಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಅಪೂರ್ಣ ಕ್ರಿಯಾಪದಗಳಿರುತ್ತವೆ.

ಉದಾ: 1) ಪುಟ್ಟನು ಬಾಳೆಹಣ್ಣನ್ನು ತಿಂದು ಸಿಪ್ಪೆಯನ್ನು ಕಸದಬುಟ್ಟಿಗೆ ಹಾಕಿದನು.
2) ಸೀತೆಯು ನಾಡನ್ನು ಬಿಟ್ಟು ಕಾಡಿಗೆ ಹೋದಳು

**ಪಡೆನುಡಿಗಳು**

ಹಲವು ವಾಕ್ಯಾಂಶಗಳು ತಮ್ಮ ಸಾಮಾನ್ಯ ಅರ್ಥವನ್ನು ಬಿಟ್ಟು ವಿಶೇಷ ಅರ್ಥವನ್ನು ಪ್ರಕಟಿಸುತ್ತವೆ. ಇಂತಹ ವಾಕ್ಯಾಂಶಗಳಿಗೆ 'ಪಡೆನುಡಿ' ಎನ್ನುವರು. ಪಡೆನುಡಿಗಳು ಭಾಷೆಗೆ ಪ್ರೌಢತೆಯನ್ನು ಕೊಡುತ್ತವೆ. ಪಡೆನುಡಿಗಳನ್ನು ಬಳಸುವುದರಿಂದ ಭಾಷಾಜ್ಞಾನ ಶಬ್ದಸಂಪತ್ತು ಹೆಚ್ಚುವುದಲ್ಲದೆ ರಂಜಕತೆಯೂ ಕೂಡ ವೃದ್ಧಿಸುತ್ತದೆ.

ಪಡೆನುಡಿಗಳು, ಅವುಗಳ ಅರ್ಥ ಹಾಗೂ ವಾಕ್ಯಗಳಲ್ಲಿ ಅವುಗಳ ಪ್ರಯೋಗ.

1) ಕಾಲಿಗೆ ಬುದ್ಧಿ ಹೇಳು = ಓಡಿಹೋಗು
ಬೆಕ್ಕನ್ನು ಕಂಡ ಕೂಡಲೇ ಇಲಿಯು ಕಾಲಿಗೆ ಬುದ್ಧಿ ಹೇಳಿತು.

2) ಕೈ ಕಟ್ಟಿ ಕೂಡು = ಚಿಂತಿಸು ವ್ಯರ್ಥಕೂಡು.
ದುಡ್ಡನ್ನು ಕಳೆದುಕೊಂಡ ಹುಡುಗನು ಕೈ ಕಟ್ಟಿ ಕುಳಿತುಕೊಂಡನು.

3) ಬೆಕ್ಕಸಬೇರಗಾಗು = ಗಾಬರಿಯಾಗು, ಆಶ್ಚರ್ಯಚಕಿತನಾಗು.
ಸಿಡಿಲಿನ ಶಬ್ದಕ್ಕೆ ಹಳ್ಳಿಯ ಜನ ಬೆಕ್ಕಸಬೆರಗಾದರು.

4) ಟೊಪ್ಪಿಗೆ ಹಾಕು = ಮೋಸಮಾಡು
ಕೆಲವೊಂದು ಸಲ ವ್ಯಾಪಾರಿಗಳು ಗ್ರಾಹಕರಿಗೆ ಟೊಪ್ಪಿಗೆ ಹಾಕಲು ಹೊಂಚ ಹಾಕುತ್ತಾರೆ

5) ಹುಬ್ಬುಗಂಟಿಕ್ಕು = ಸಿಟ್ಟಿಗೆ ಬರು
ಗೀತೆಯು ಹೇಳಿದ ವಸ್ತುವನ್ನು ತರದಿದ್ದಕ್ಕಾಗಿ ಅಪ್ಪನ ಮೇಲೆ ಹುಬ್ಬುಗಂಟಿಕ್ಕಿದ್ದಳು



Downloaded from https:// www.studiestoday.com

Downloaded from https:// www.studiestoday.com

## ನಿಬಂಧ ಬರಹ

ಓದುವುದು ಒಂದು ಕಲೆಯಾಗಿರುವಂತೆ ಬರೆಯುವುದೂ ಒಂದು ಕಲೆ. ಬರೆವಣಿಗೆಯಿಂದ ವಿದ್ಯಾರ್ಥಿಯ ಅರ್ಹತೆಯನ್ನು ಅಳೆಯಲಾಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳು ಹಲವಾರು ಪುಸ್ತಕಗಳನ್ನು ಓದಬೇಕಾಗುತ್ತದೆ. ಅಂದಾಗ ಮಾತ್ರ ಉತ್ತಮವಾದ ನಿಬಂಧವನ್ನು ಬರೆಯಲು ಸಾಧ್ಯವಾಗುತ್ತದೆ.

ನಿಬಂಧಗಳಲ್ಲಿ ಹಲವಾರು ಪ್ರಕಾರಗಳು.

1) ನಿರೂಪಣಾತ್ಮಕ

2) ವರ್ಣನಾತ್ಮಕ

3) ಕಥನಾತ್ಮಕ

4) ವೈಚಾರಿಕ

5) ಕಾಲ್ಪನಿಕ

6) ಆತ್ಮಕಥೆ

ನಿಬಂಧ

ಪರಿಸರ ಮಾಲಿನ್ಯ

ಕೊಟ್ಟ ಅಂಶಗಳ ಆಧಾರದಿಂದ ನಿಬಂಧ ರಚಿಸುವುದು.

- ನಮ್ಮ ಸುತ್ತಮುತ್ತಲಿನ ವಾತಾವರಣಕ್ಕೆ ಪರಿಸರ
- ಗಿಡ, ವಾಯು, ಜಲ, ಶಬ್ದ, ಸಸ್ಯ ಗಿರಿ, ಮೊದಲಾದವು
- ಭೌತಿಕ, ಭೌಗೋಲಿಕ, ಆರ್ಥಿಕ, ಸಾಮಾಜಿಕ, ಪರಿಸರಗಳೆಂದು
- ಪರಿಸರ ಮಾಲಿನ್ಯ, ಜಲ, ವಾಯು, ಶಬ್ದ
- ಕಾಡುಗಳ ನಾಶ
- ಅತಿವೃಷ್ಟಿ, ಅನಾವೃಷ್ಟಿ, ವಿಶ್ವತಾಪಮಾನ ಪರಿಸರ ಮಾಲಿನ್ಯಕ್ಕೆ ಕಾರಣಗಳು
- ಕಾರ್ಬನ, ವಾಹನಗಳು, ಮಿತಿಮೀರಿದ ಜನಸಂಖ್ಯೆ



Downloaded from https:// www.studiestoday.com

Downloaded from https:// www.studiestoday.com

ಪರಿಹಾರೋಪಾಯ

- ಗಿಡ, ಮರಗಳನ್ನು ನೆಡುವುದು
- ವಾಹನಗಳ ಮಿತವಾದ ಬಳಕೆ
- ಕಾರ್ಖಾನೆಗಳ ಹೊಗೆ ಹಾಗೂ ನೀರು ಪರಿಸರಕ್ಕೆ ಧಕ್ಕೆ ಯಾಗದಂತೆ ನೋಡಿಕೊಳ್ಳುವುದು
- ಸ್ವಚ್ಛತಾ ಅಭಿಯಾನ
- ರಾಸಾಯನಿಕ ಗೊಬ್ಬರ ಬಳಸದಿರುವುದು
- ಕ್ರಿಮಿನಾಶಕಗಳನ್ನು ದೂರೀಕರಿಸುವುದು

**ಕಥಾರಚನೆ**

ಕೊಟ್ಟ ಅಂಶಗಳ ಆಧಾರದಿಂದ ಕಥೆಯನ್ನು ರಚಿಸುವುದು

ಚಿನ್ನದ ಮೊಟ್ಟೆ ಇಡುವ ಕೋಳಿ

- ಒಂದೂರಿನಲ್ಲಿ ಒಬ್ಬ ಮನುಷ್ಯ
- ಕೋಳಿ ಸಾಕಿದ್ದು
- ಚಿನ್ನದ ಮೊಟ್ಟೆ ಇಡುತ್ತಿತ್ತು
- ಅತಿ ಆಸೆಯ ಮನುಷ್ಯನಲ್ಲಿ ಮೂಡಿದ ದುರಾಸೆ
- ಬೇಗನೆ ಶ್ರೀಮಂತ ನಾಗಬೇಕೆಂಬ ಆಸೆ
- ಕೋಳಿಯನ್ನು ಕೊಯ್ದದ್ದು
- ನಿರಾಶೆ ಯಾದದ್ದು
- ಅತಿ ಆಸೆ ಗತಿಗೇಡು



Downloaded from https:// www.studiestoday.com

Downloaded from https:// www.studiestoday.com

## ಪತ್ರಲೇಖನ

ಪ್ರಮುಖವಾಗಿ ಪತ್ರಲೇಖನದಲ್ಲಿ ಎರಡು ವಿಧಗಳು. ಔಪಚಾರಿಕ ಹಾಗೂ ಅನೌಪಚಾರಿಕ ಪತ್ರ. ಸಾಮಾನ್ಯವಾಗಿ ನಮ್ಮ ಕುಟುಂಬ, ಸ್ನೇಹಿತರು,ಸಂಬಂಧಿಕರು ಮುಂತಾದವರಿಗೆ ಬರೆಯುವ ಪತ್ರ ಅನೌಪಚಾರಿಕ ಪತ್ರ. ಮುಖ್ಯಾಧ್ಯಾಪಕರು, ವಿವಿಧ ಅಧಿಕಾರಿಗಳು, ಕಛೇರಿಗಳು, ಅಂಗಡಿಗಳು ಮುಂತಾದ ದೈನಂದಿನ ವ್ಯವಹಾರಕ್ಕಾಗಿ ಬರೆಯುವ ಪತ್ರಗಳಿಗೆ ಔಪಚಾರಿಕ ಪತ್ರಗಳೆನ್ನುವರು.

## ಪತ್ರಲೇಖನ

ಕೊಟ್ಟ ಅಂಶಗಳು ಆಧಾರದಿಂದ ಸಂಬಂಧಿಕರಿಗೆ/ಗೆಳೆಯನಿಗೆ ಪತ್ರ ಬರವಣಿಗೆ

ಇಂದ-
ರಮೇಶ

ಎಸ್‌ಬಿ ವಿದ್ಯಾಮಂದಿರ
ಮುಖ್ಯ ರಸ್ತೆ,
ವಿಜಯಪುರ

ಗೇ.....

- ತೀರ್ಥರೂಪ ತಂದೆ
- ವಿಜಯಪುರದಿಂದ ತಮ್ಮ ಮಗ
- ಕ್ಷೇಮ ಸಮಾಚಾರ
- ಶಾಲೋಪೋಗಿ ವಸ್ತುಗಳು
- ಸುಮಾರು 1000ರೂ
- 15 ದಿನಗಳಲ್ಲಿ
- ಎಲ್ಲರಿಗೂ ಸಮಸ್ಕಾರ

ತಮ್ಮ
ಪ್ರೀತಿಯ ಮಗ

ಗೇ..........

ಶ್ರೀ ಚಂದ್ರಶೇಖರ
ಗೌರಿಶಂಕರ ಗುಡಿಯ ಹತ್ತಿರ,
ಮುಖ್ಯ ಬೀದಿ,
ಬಾಗಲಕೋಟ.



Downloaded from https:// www.studiestoday.com

Downloaded from https:// www.studiestoday.com

## ಆಮಂತ್ರಣ ಪತ್ರಿಕೆ

ಆಮಂತ್ರಣ ಪತ್ರಿಕೆಗಳಲ್ಲಿ ಹಲವು ವಿಧ ಅದನ್ನು ಮುಖ್ಯವಾಗಿ ಮೂರು ಭಾಗಗಳಲ್ಲಿ ವಿಂಗಡಿಸಬಹುದು. ಅವು ವೈಯಕ್ತಿಕ, ಸಾಮಾಜಿಕ ಹಾಗೂ ವ್ಯವಹಾರಿಕ ಆಮಂತ್ರಣ ಪತ್ರಿಕೆಗಳು, ಆಯಾ ವ್ಯಕ್ತಿಗಳ ಸಂಬಂಧ, ಅವರು ನಡೆಸುವ ಕೌಟುಂಬಿಕ ಸಮಾರಂಭ ಇತ್ಯಾದಿಗಳು. ಉದಾ:- ವಿವಾಹ ಸಮಾರಂಭ, ಗೃಹ ಪ್ರವೇಶ, ಉಪನಯನ, ಇತ್ಯಾದಿ. ವ್ಯಾವಹಾರಿಕ ಆಮಂತ್ರಣ ಪತ್ರಿಕೆಗಳು ಅವನ್ನು ನಡೆಸುವವರನ್ನು ಅವಲಂಬಿಸಿರುತ್ತವೆ. ಇನ್ನು ಸಾಮಾಜಿಕಕ ಆಮಂತ್ರಣ ಪತ್ರಿಕೆಗಳು- ಊರಲ್ಲಿಯ ಜಾತ್ರೆ, ನಾಟಕ, ಸಾರ್ವಜನಿಕ ಕಾರ್ಯಕ್ರಮಗಳಿಗೆ ಆಯಾ ಸನ್ನಿವೇಶಗಳಿಗೆ ಅನ್ವಯಿಸುತ್ತವೆ. ಉದಾಹರಣೆಗೆ ಒಂದು ಮಾದರಿಯನ್ನು ಇಲ್ಲಿ ಕೊಡಲಾಗಿದೆ.

### ಆಮಂತ್ರಣ ಪತ್ರಿಕೆ

ನಿಮ್ಮ ಶಾಲೆಯಲ್ಲಿ ನಡೆಯುವ 10ನೇ ವರ್ಗ ವಿದ್ಯಾರ್ಥಿಗಳು ಬೀಳ್ಕೊಡುವ ಸಮಾರಂಭದ ಆಮಂತ್ರಣ ಪತ್ರಿಕೆಯನ್ನು ಸಿದ್ಧಪಡಿಸಿರಿ.

ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ
ಶ್ರೀ ಬಸವೇಶ್ವರ ಪ್ರೌಢ ಶಾಲೆ ಬಾಗಲಕೋಟ

ಮಹನೀಯರೇ ..............

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಮ್ಮ ಶಾಲೆಯ 10ನೇ ವರ್ಗ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವನ್ನು ದಿನಾಂಕ 10/2/2017 ರಂದು ಬೆಳಿಗ್ಗೆ 10 ಗಂಟೆಗೆ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದೇವೆ. ಕಾರಣ ತಾವುಗಳು ಈ ಕಾರ್ಯಕ್ರಮಕ್ಕೆ ಆಗಮಿಸಿ ಶೋಭೆ ತರಬೇಕಾಗಿ ವಿನಂತಿ.

ಅಧ್ಯಕ್ಷರು:- ಸಂಸ್ಥೆಯ ಚೇಅರಮನ್ನರು

ಕೌರವ ಅತಿಥಿಗಳು- ಶ್ರೀ ಬಿ. ಪ್ರಾಣೇಶ (ಹಾಸ್ಯಕಲಾವಿದರು)
ಮುಖ್ಯ ಅತಿಥಿಗಳು- ಡಾ. ಗೋಪಾಲರಾವ್ (ಸಾಹಿತಿಗಳು)
ಡಾ. ಸುಮತಿ ನಾಯಕ

ದಿನಾಂಕ 10/2/2017 ಸಮಯ: ಬೆಳಿಗ್ಗೆ 10 ಗಂಟೆಗೆ

ಸ್ಥಳ: ಶಾಲೆಯ ಆವರಣ

''ಸರ್ವರಿಗೂ ಆದರದ ಸ್ವಾಗತ''

ಕೆ. ವಿಜಯರಾಜ
ವಿದ್ಯಾರ್ಥಿ ಪ್ರತಿನಿಧಿ

ಮುಖ್ಯಾಧ್ಯಾಪಕರು
ಶ್ರೀ ಬಸವೇಶ್ವರ ಪ್ರೌಢ ಶಾಲೆ
ಬಾಗಲಕೋಟ



Downloaded from https:// www.studiestoday.com

Downloaded from https:// www.studiestoday.com



2ND END PAPER

Downloaded from https:// www.studiestoday.com

Downloaded from https:// www.studiestoday.com



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

कन्नड सुगमभारती इ.१० वी (कन्नड भाषा) ₹42.00

Downloaded from https:// www.studiestoday.com